MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

YUVA MARGA KANNADA DAILY NEWS PAPER


ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ : 206 | ಶುಕ್ರವಾರ : 30-05-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 206 | FRIDAY : 30-05-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

ಯುವ ಸ್ಫೂರ್ತಿ



"ನಾವು ಯಾವಾಗಲೂ ಶ್ರದ್ಧೆಯಿಂದ ಮುನ್ನಡೆಯಬೇಕು, ಯಾವ ಹೋರಾಟವನ್ನೂ ನಿಲ್ಲಿಸಬಾರದು."
–ಸ್ವಾಮಿ ವಿವೇಕಾನಂದ

## ಬೆದರಿಕೆಗೆ ಅಂಜಿ ಯುವಕ ಆತ್ಮಹತ್ಯೆ..?

ಯುವ ಮಾರ್ಗ ಸುದ್ದಿ

**ಲಿಂಗಸುಗೂರು :** ಬಸ್ ಚಾಲಕ ಮತ್ತು ನಿರ್ವಾಹಕರ ಬೆದರಿಕೆಗೆ ಅಂಜಿ ಯುವಕನೋರ್ವ ಆತ್ಮ ಹತ್ಯೆ ಮಾಡಿಕೊಂಡಿರುವ ಘಟನೆ ಗುರುವಾರ ಜರುಗಿದ್ದು, ಕುಟುಂಬಸ್ಥರು ಮೃತ ದೇಹವನ್ನು ಸಾರಿಗೆ ಘಟಕದ ಮುಂದೆ ಇಟ್ಟು ಪ್ರತಿಭಟನೆ ನಡೆಸಿದರು. ಪರಿಸ್ಥಿತಿ ತಿಳಿಗೊಳಿಸಲು ಪೊಲೀಸರು ಹರಸಾಹಸ ಪಟ್ಟರು. ಗಂಟೆಗಳ ಕಾಲ ಪರಿಸ್ಥಿತಿ ಉದ್ವಿಘ್ನಗೊಂಡಿತ್ತು.





ಘಟನೆ ವಿವರ : ತಾಲ್ಲೂಕಿನ ಹುನಕುಂಟಿ ಗ್ರಾಮದ ಮುಕ್ಕಣ್ಣ ದೇವಪ್ಪ ಕುರಿ (20)ಎನ್ನುವ ಯುವಕ ಗ್ರಾಮದ ರಸ್ತೆ ಪಕ್ಕ ನಿಂತಿದ್ದ ವೇಳೆ ಸಜ್ಜಲಗುಡ್ಡ ಬೆಂಗಳೂರು ಬಸ್ ಹಾದು ಹೋಗುವಾಗ ಕ್ಷುಲ್ಲಕ ಕಾರಣಕ್ಕೆ ಚಾಲಕ ನಿರ್ವಾಹಕರೊಂದಿಗೆ ವಾದ ಮಾಡಿಕೊಂಡಿದ್ದಾರೆ.

ಪರಿಣಾಮ ಯುವಕನ ವಿರುದ್ಧ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲು ಮಾಡಿದ್ದಾರೆ. ಅಲ್ಲದೇ ಆತನಿಗೆ ಬೆದರಿಕೆ ಹಾಕಿದ್ದಾರೆಂದು ಪ್ರತ್ಯಕ್ಷದರ್ಶಿಗಳ ಮಾತಾಗಿದೆ. ಇದರಿಂದ ಹೆದರಿದ ಯುವಕ ತಮ್ಮ ಜಮೀನಿನಲ್ಲಿ ನೇಣಿಗೆ ಶರಣಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಹೇಳಲಾಗುತ್ತಿದೆ.

## ಕೋವಿಡ್ ಪ್ರಕರಣಗಳು ವರದಿ: ಮುಂಜಾಗ್ರತೆ ವಹಿಸಲು ಸಾರ್ವಜನಿಕರಿಗೆ ಸೂಚನೆ

ಯುವ ಮಾರ್ಗ ಸುದ್ದಿ



**ರಾಯಚೂರು :** ರಾಜ್ಯದಲ್ಲಿ ದಿನೇದಿನೆ ಕೋವಿಡ್-19ರ ಪ್ರಕರಣಗಳು ಹೆಚ್ಚು ವರದಿಯಾಗುತ್ತಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದ ಆದೇಶದ ಪ್ರಕಾರ ಜಿಲ್ಲೆಯಲ್ಲಿ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದ್ದು, ಸಾರ್ವಜನಿಕರು ಭಯಪಡದೆ ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಕೋವಿಡ್-19ರ ಪರೀಕ್ಷೆಗಾಗಿ ರ್ಯಾಟ್ ಟೆಸ್ಟ್ ವೈದ್ಯರ ಸಲಹೆ ಮೇರೆಗೆ ರಿಮ್ಸ್ ಮತ್ತು ಎಲ್ಲಾ ತಾಲೂಕು ಆಸ್ಪತ್ರೆಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ಆರ್.ಟಿ.ಪಿ.ಸಿ.ಆರ್ ಪರೀಕ್ಷೆಗೆ ವಿಮ್ಸ್ ಬಳ್ಳಾರಿ ಪ್ರಯೋಗಾಲಯ ನಿಗದಿ ಪಡಿಸಿರುವುದರಿಂದ ಎಲ್ಲಾ ಮಾದರಿಗಳನ್ನು ಅಲ್ಲಿಯೇ ಪರೀಕ್ಷೆಗೆ ಒಳಪಡಿಸಲಾಗುವುದು.

ಜಿಲ್ಲೆಯ ರಿಮ್ಸ್ ಆಸ್ಪತ್ರೆಯಲ್ಲಿ 20 ಹಾಸಿಗೆಗಳ ವಾರ್ಡ್ ಮತ್ತು 5 ಐ.ಸಿ.ಯು. ಹಾಸಿಗೆಗಳು ಸೇರಿದಂತೆ ಪ್ರತಿ ತಾಲೂಕು ಆಸ್ಪತ್ರೆಗಳಲ್ಲಿ 5 ಹಾಸಿಗೆಗಳ ವಾರ್ಡ್‌ನ್ನು ಕಾಯ್ದಿರಿಸಲಾಗಿದೆ. ಇಲ್ಲಿಯವರೆಗೂ ಜಿಲ್ಲೆಯಲ್ಲಿ ಯಾವುದೇ ಪ್ರಕರಣಗಳು ಕಂಡು ಬಂದಿಲ್ಲ. ಸಾರ್ವಜನಿಕರು ಭಯಪಡುವ ಅವಶ್ಯಕತೆ ಇರುವುದಿಲ್ಲ. ಮುಂಜಾಗ್ರತಾ ಕ್ರಮಗಳನ್ನು ವಹಿಸುವುದು ಅವಶ್ಯಕವಾಗಿರುತ್ತದೆ.

ಎಲ್ಲಾ ಸಾರಿ ಪ್ರಕರಣಗಳಿಗೆ ಕಡ್ಡಾಯವಾಗಿ ಕೋವಿಡ್-19ರ ಪರೀಕ್ಷೆ ಮಾಡಿಸುವುದು., ವಯೋವೃದ್ಧರಲ್ಲಿ, ಮಕ್ಕಳಲ್ಲಿ, ಗರ್ಭಿಣಿಯರಲ್ಲಿ ರೋಗ ಲಕ್ಷಣಗಳು ಕಂಡು ಬಂದಲ್ಲಿ ಪರೀಕ್ಷೆ ಮಾಡಿಸುವುದು, ಶೀತ, ನೆಗಡಿ, ಜ್ವರ ಇರುವ ಮಕ್ಕಳನ್ನು ಪೋಷಕರು ಶಾಲೆಗೆ ಕಳುಹಿಸದಿರುವುದು ಉತ್ತಮ., ಆಗಾಗ್ಗೆ ಸಾಬೂನಿನಿಂದ ಅಥವಾ ಸೆನಿಟ್ಯಾಜರ್‌ನಿಂದ ಕೈ ತೊಳೆಯಬೇಕು., ಕೆಮ್ಮುವಾಗ ಅಥವಾ ಶೀನುವಾಗ ಕರವಸ್ತ್ರ ಉಪಯೋಗಿಸುವುದು., ಯಾವುದೇ ತರಹದ ಕೆಮ್ಮು, ನೆಗಡಿ, ಗಂಟಲು ನೋವು, ಜ್ವರ ಕಂಡು ಬಂದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬೇಕು.

ಖಚಿತ ಪ್ರಕರಣಗಳಲ್ಲಿ ಅಲ್ಪಪ್ರಮಾಣದ ಲಕ್ಷಣಗಳು ಇರುವ ರೋಗಿಗಳಿಗೆ ಹೋಮ್ ಐಸೋಲೇಷನ್ ಮಾಡಲಾಗುವುದು. ತೀವ್ರತರದ ರೋಗ ಲಕ್ಷಣಗಳು ಇರುವವರಿಗೆ ರಾಯಚೂರು ರಿಮ್ಸ್ ಮತ್ತು ಆಯಾ ತಾಲೂಕು ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾನ್ವಿ: ಶೈಕ್ಷಣಿಕ ವರ್ಷ ಪ್ರಾರಂಭಕ್ಕೆ ಶಿಕ್ಷಣ ಇಲಾಖೆ ರೆಡಿ

ಯುವ ಮಾರ್ಗ ಸುದ್ದಿ

**ಮಾನ್ವಿ:** ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ವ್ಯಾಪ್ತಿಯಲ್ಲಿ ಮಾನ್ವಿ,ಸಿರವಾರ ಹಾಗೂ ಮಸ್ಕಿ ತಾಲೂಕಿನ 3 ಹೋಬಳಿಗಳು ಒಳಗೊಂಡಿದ್ದು ಮೇ.30 ರಂದು 2025-26 ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಶಾಲೆಗಳ ಪ್ರಾರಂಭಕ್ಕೆ ಶಿಕ್ಷಣ ಇಲಾಖೆ ಮುಂದಾಗಿದೆ. ಮಾನ್ವಿ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾನ್ವಿ,ಸಿರವಾರ ತಾಲೂಕುಗಳು ಹಾಗೂ ಮಸ್ಕಿ ತಾಲೂಕಿನ 3 ಹೋಬಳಿಗಳು ಸೇರಿದ್ದು ಸರ್ಕಾರಿ ಪ್ರಾಥಮಿಕ ಶಾಲೆಗಳು 273, ಫ್ರೌಢಶಾಲೆಗಳು 43, ವಸತಿ ಶಾಲೆಗಳು 10, ಅನುದಾನಿತ 6 ಪ್ರಾಥಮಿಕ, 1 ಫ್ರೌಢಶಾಲೆ , ಅನುದಾನರಹಿತ ಪ್ರಾಥಮಿಕ ಶಾಲೆಗಳು 80, ಫ್ರೌಢಶಾಲೆ 25 , ದ್ವಿಭಾಷ ಪದ್ದತಿಯಲ್ಲಿ ಕಲಿಸುವ ಸರ್ಕಾರಿ ನರ್ಸರಿ ಶಾಲೆ 29, ಇವುಗಳಲ್ಲಿ ಅಂದಾಜು 67312 ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ ಕಾಪಾಡಬೇಕಾಗಿದೆ.

ಶಿಕ್ಷಕರ ಹುದ್ದೆ ಜೊತೆಗೆ ಮದ್ಯಾಹ್ನದ ಬಿಸಿಯೂಟ 2ನೇಪುಟಕ್ಕೆ




ಮಾನ್ವಿ: ತಾಲೂಕಿನ ಬಲ್ಲಟಗಿ ಗ್ರಾಮದ ಜನತಾ ಕಾಲೋನಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ದೊಡ್ಡಮನಿ ಭೇಟಿ ನೀಡಿ ಸ್ವಚ್ಛತಾ ಕಾರ್ಯ ಕೈಗೊಳ್ಳಲು ಶಿಕ್ಷಕರಿಗೆ ಮಾರ್ಗದರ್ಶನ ನೀಡಿದರು.

## ಮಳೆ ಹಾನಿ ಪರಿಹಾರ ಮತ್ತು ಶಾಶ್ವತ ಕ್ರಮಕೈಗೊಳ್ಳಲು ಅಶೋಕ್ ಆಗ್ರಹ

**ಬೆಂಗಳೂರು:**ರಾಜ್ಯದಲ್ಲಿ ಮಳೆ ಹಾನಿ ಮತ್ತು ಭೂ ಕುಸಿತದಿಂದ ಹಾನಿಗೊಳಗಾದ ಪ್ರದೇಶಗಳ 'ಲ್ಲಿ ತಕ್ಷಣ ಪರಿಹಾರ ಮತ್ತು ಶಾಶ್ವತ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಮಳೆಯಿಂದ ರೈತರು ತೊಂದರೆಗೊಳಗಾಗಿದ್ದು, ರೈತರ ಕೃಷಿ ಸಾಲವನ್ನು ಮನ್ನಾ ಮಾಡಬೇಕು ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪತ್ರ ಬರೆದಿರುವ ಅವರು, ಕಳೆದ 50 ವರ್ಷಗಳ ನಂತರ ಈ ವರ್ಷ ಮುಂಗಾರು 15 ದಿನ ಮುಂಚಿತವಾಗಿ ರಾಜ್ಯವನ್ನು ಪ್ರವೇಶಿಸಿದೆ.



ಬಹುತೇಕ ಜಿಲ್ಲೆಗಳಲ್ಲಿ ಭಾರೀ ಮಳೆ, ಬಿರುಗಾಳಿಯಾಗಿದೆ. ಇದರಿಂದ ಜನರ ಮನೆಗಳಿಗೆ ಹಾನಿಯಾಗಿವೆ. ರೈತರ ಬೆಳೆಗಳಿಗೂ ಅಪಾರ ಪ್ರಮಾಣದ ನಷ್ಟವಾಗಿದೆ. ಮಲೆನಾಡು ಭಾಗದಲ್ಲಿ ಭೂಕುಸಿತ ಸಹ ಸಂಭವಿಸಿದೆ. ಸರ್ಕಾರ ಕೂಡಲೇ ಮಳೆಯಿಂದ ತೊಂದರೆಗೊಳಗಾದವರಿಗೆ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಕಳೆದ ಮಂಗಳವಾರ ಹಾಸನ ಜಿಲ್ಲೆಗೆ ಭೇಟಿ ನೀಡಿ ಮಳೆ ಹಾನಿ ಪ್ರದೇಶಗಳಿಗೆ ಹಾಗೂ ಭೂಕುಸಿತ ಸಂಭವಿಸಿದ ಪ್ರದೇಶಗಳಿಗೂ ಭೇಟಿ ನೀಡಿದ್ದೆ. ಅಲ್ಲಿ ಸಂತ್ರಸ್ತರು ಕಣ್ಣೀರು ಹಾಕುತ್ತಿದ್ದರೂ ಯಾರಿಗೂ ಸರ್ಕಾರದ ನೆರವು ಸಿಕ್ಕಿಲ್ಲ. ಯಾವುದೇ ಅಧಿಕಾರಿಗಳು ಸಂತ್ರಸ್ತರ ಬಳಿಗೆ ಹೋಗಿಯೇ ಇಲ್ಲ ಎಂದು ಅಶೋಕ್ ಪತ್ರದಲ್ಲಿ ಹೇಳಿದ್ದಾರೆ.

ಸರ್ಕಾರದಲ್ಲಿ ಅನುದಾನದ ಕೊರತೆ ಎದ್ದು ಕಾಣುತ್ತಿದೆ. ಅನೇಕ ಯೋಜನೆಗಳನ್ನು ಕೈಬಿಡಲಾಗಿದೆ. ಇನ್ನು ಹಲವು ಯೋಜನೆಗಳಿಗೆ ಅನುದಾನ ಕಡಿತಗೊಳಿಸಲಾಗಿದೆ. ಮಳೆಯಿಂದ ಜನರು ಸಂಕಷ್ಟದಲ್ಲಿರುವ ಈ ಸಮಯದಲ್ಲಿ ಪರಿಹಾರ ಕಾರ್ಯಾಚರಣೆಗಳೊಂದಿಗೆ ಯಾವುದೇ ಕಾರಣಕ್ಕೂ ಅನುದಾನ ಕೊರತೆಯ 2ನೇಪುಟಕ್ಕೆ

## ವಿಶ್ವ ಸ್ಕೀಜೋಪ್ರಿನಿಯಾ ದಿನ ಅರಿವು ಮೂಡಿಸುವ ಕಾರ್ಯಕ್ರಮ

ಯುವ ಮಾರ್ಗ ಸುದ್ದಿ

**ಮಾನ್ವಿ:** ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿನ ತಾ.ಆರೋಗ್ಯ ಇಲಾಖೆಯ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ ಹಾಗೂ ತಾಲೂಕು ಆರೋಗ್ಯ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವ ಸ್ಕೀಜೋಪ್ರಿನಿಯಾ ದಿನ ಅರಿವುಮೂಡಿಸುವ ಕಾರ್ಯಕ್ರಮವನ್ನು ಮನೋರೋಗ ತಜ್ಞರಾದ ಡಾ.ಮನೋಹರ ಪತ್ತಾರ ಉದ್ಘಾಟಿಸಿ ಮಾತನಾಡಿ, ಸ್ಕೀಜೋಪ್ರಿ ನಿಯಾ ಕಾಯಿಲೆಯು ಒಂದು ಮಾನಸಿಕ ಕಾಯಿಲೆಯಾಗಿದ್ದು, ವ್ಯಕ್ತಿಗಳ



'ಲ್ಲಿ ಹಂತ ಹಂತವಾಗಿ ಮನಸ್ಥಿತಿಯನ್ನು,ಭಾವನೆ ,ವರ್ತನೆ, ನಡವಳಿಕೆಗಳನ್ನು ಹದಗೆಡಿಸುತ್ತದೆ ಈ ಕಾಯಿಲೆ ಬಂದ ವ್ಯಕ್ತಿಗಳಿಗೆ ದೆವ್ವ, ಭೂತ,ಹಿಂದಿನ ಜನ್ಮದ ಪಾಪ, ಕರ್ಮ, ಮಾಟ ಮಂತ್ರದಿಂದ ಬರುತ್ತದೆ ಎನ್ನುವ ತಪ್ಪು ಕಲ್ಪನೆ ಸಾಮಾನ್ಯ ಜನರಲ್ಲಿ ಇದೆ ಅದರೆ ಮನೋರೋಗ ತಜ್ಞರಿಂದ ಚಿಕಿತ್ಸೆ ಕೋಡಿಸಿದಲ್ಲಿ ಗುಣಮುಖರಾಗುವುದಕ್ಕೆ ಸಾಧ್ಯವಿದೆ ಇಂತಹ ಮಾನಸಿಕ ಕಾಯಿಲೆಯ ಲಕ್ಷಣ ಗಳುಳ್ಳ ವ್ಯಕ್ತಿಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತದೆ. ಹಾಗೂ 14416 ಟೆಲಿ ಮನಸ್ಸು ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಮಾಹಿತಿ 2ನೇ ಪುಟಕ್ಕೆ

## ಇಂದಿರಾ ಕ್ಯಾಂಟೀನ್, ಬಸ್ ನಿಲ್ದಾಣದಲ್ಲಿ ಸೌಲಭ್ಯಗಳ ಕೊರತೆ – ಸಾರ್ವಜನಿಕರ ಆಕ್ರೋಶ


ಯುವ ಮಾರ್ಗ ಸುದ್ದಿ

**ಸಿರವಾರ:** ಇತ್ತೀಚೆಗೆ ಸಿರವಾರ ಪಟ್ಟಣದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಇಂದಿರಾ ಕ್ಯಾಂಟೀನ್ ಅನ್ನು ಸಚಿವರು ಮತ್ತು ಶಾಸಕರು ಅದ್ದೂರಿಯಾಗಿ ಉದ್ಘಾಟಿಸಿದ್ದರು. ಆದರೆ, ಉದ್ಘಾಟನೆಯಾಗಿ ಹಲವು ದಿನಗಳು ಕಳೆದರೂ ಕ್ಯಾಂಟೀನ್‌ನಲ್ಲಿ ಇದುವರೆಗೂ ಊಟದ ವ್ಯವಸ್ಥೆ ಆರಂಭಗೊಂಡಿಲ್ಲ. ಅಷ್ಟೇ ಅಲ್ಲದೆ, ಕಟ್ಟಡ ಕಾಮಗಾರಿ ಸಂಪೂರ್ಣವಾಗಿ ಮುಗಿಯದ ಕಾರಣ ಮಳೆ ಬಂದರೆ ಒಳಗೆ ನೀರು ಸೋರುತ್ತಿದೆ. ಕಟ್ಟಡದ ಕಳಪೆ ಗುಣಮಟ್ಟದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿದ್ದು, ಯಾವ ಕಾರಣಕ್ಕೆ ಅಧಿಕಾರಿಗಳು, ಸಚಿವರು ಮತ್ತು ಶಾಸಕರು ಅಪೂರ್ಣ ಕಾಮಗಾರಿ ಇರುವ ಕಟ್ಟಡವನ್ನು




ಉದ್ಘಾಟಿಸಿದ್ದಾರೆ ಎಂಬ ಪ್ರಶ್ನೆ ಮೂಡಿದೆ.

ಇದೇ ರೀತಿಯ ಪರಿಸ್ಥಿತಿ ಸಿರವಾರ ಬಸ್ ನಿಲ್ದಾಣಕ್ಕೂ ಎದುರಾಗಿದೆ. ಇತ್ತೀಚೆಗೆ ಉದ್ಘಾಟನೆಗೊಂಡ ಬಸ್ ನಿಲ್ದಾಣದಲ್ಲಿ ಇದುವರೆಗೂ ಆಸನಗಳು, ಕಾಂಪೌಂಡ್ ಮತ್ತು ಇತರ



ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸಿಲ್ಲ. ಈ ರೀತಿ ಉದ್ಘಾಟನೆ ಮಾಡಿದರೂ ಸೌಲಭ್ಯಗಳನ್ನು ಒದಗಿಸದೆ ಇರುವುದು ಸಿರವಾರ ತಾಲೂಕಿನ ಭವಿಷ್ಯದ ಬಗ್ಗೆ ಆತಂಕ ಮೂಡಿಸಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಸಿರವಾರ ತಾಲೂಕು ಘಟಕದ ಅಧ್ಯಕ್ಷ ಕೆ. ರಾಘವೇಂದ್ರ ಖಾಜನಗೌಡ ಅವರು, "ಕ್ಯಾಂಟೀನ್ ಅನ್ನು ಮುಂದಿನ 2 ದಿನಗಳಲ್ಲಿ ಆರಂಭ ಮಾಡದಿದ್ದರೆ ಉಗ್ರ ಹೋರಾಟ ನಡೆಸಬೇಕಾಗುತ್ತದೆ" ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಸಾರ್ವಜನಿಕರಿಗೆ ಅನುಕೂಲವಾಗುವಂತೆ ನಿರ್ಮಿಸಲಾಗಿರುವ ಯೋಜನೆಗಳು ಕೇವಲ ಉದ್ಘಾಟನೆಗೆ ಮಾತ್ರ ಸೀಮಿತವಾಗದೆ, ಅವುಗಳ ಉದ್ದೇಶ ಈಡೇರುವಂತೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಯುವ ಮಾರ್ಗ
ಶುಕ್ರವಾರ : 30–05–2025

## ಮೊದಲನೇಯ ಪುಟದಿಂದ

# ಮಾನ್ವಿ: ಶೈಕ್ಷಣಿಕ ವರ್ಷ ಪ್ರಾರಂಭಕ್ಕೆ ಶಿಕ್ಷಣ ಇಲಾಖೆ ರೆಡಿ

ನಿರ್ವಹಣೆಯ ಅಕ್ಷರ ದಾಸೋಹ ತಾ.ಸಹಾಯಕ ನಿರ್ದೇಶಕರ ಹುದ್ದೆ ಖಾಲಿ, ತಾ.ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆ ಖಾಲಿ, ಶಿಕ್ಷಣ ಸಂಯೋಜಕರ 3 ಹುದ್ದೆಗಳು ಖಾಲಿ, ಸಿ.ಆರ್.ಪಿ 24 ಹುದ್ದೆಗಳಲ್ಲಿ 9 ಸಿ.ಆರ್.ಪಿ ಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು 15 ಹುದ್ದೆಗಳು ಖಾಲಿ ಇವೆ.

ಮಾನ್ವಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ ಮಾತನಾಡಿ ಮೇ.30 ರಂದು ತಾಲೂಕಿನ ಎಲ್ಲಾ ಸರ್ಕಾರಿ ,ಅನುದಾನಿತ,ಅನುದಾನ ರಹಿತ,ವಸತಿ ಶಾಲೆಗಳಲ್ಲಿ ಶೈಕ್ಷಣಿಕ ವರ್ಷ ಪ್ರಾರಂಭಕ್ಕೆ ಶಿಕ್ಷಣ ಇಲಾಖೆಯಿಂದ ಸಕಾಲ ಸಿದ್ದತೆಗಳನ್ನು ಕೈಗೊಂಡಿದ್ದು ಶಿಕ್ಷಣ ಪ್ರೇಮಿಗಳು, ಶಾಲಾ ಸುಧರಣಾ ಸಮಿತಿಯ ಪದಾಧಿಕಾರಿಗಳು ,ಶಾಲೆಯ ಮುಖ್ಯಗುರುಗಳು,ಶಿಕ್ಷಕರು ಮಕ್ಕಳನ್ನು ಶಾಲೆಗೆ ಸ್ವಾಗತಿಸಿ ಬರಮಾಡಿಕೊಳ್ಳಲಿದ್ದಾರೆ. ಶಾಲಾ ಪ್ರಾರಂಭದಂದು ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಸಿಹಿಯನ್ನು ನೀಡಲಾಗುವುದು. ಕಾಯಂ ಶಿಕ್ಷಕರ ಕೊರತೆ ಇರುವ ಕಡೆ ಹತ್ತಿರದ ಶಾಲೆಗಳ ಶಿಕ್ಷಕರನ್ನು ಎರವಲು ಸೇವೆಯಾಗಿ ನಿಯೋಜಿಸಲಾಗುವುದು ಹಾಗೂ ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗುವುದು.

ಶಾಲೆಗಳಲ್ಲಿ ಶಿಥಿಲಗೊಂಡಿರುವ ಅಸುರಕ್ಷಿತವಾದ ಕೋಣೆಗಳಲ್ಲಿ ಮಕ್ಕಳನ್ನು ಕೂಡಿಸದಂತೆ ಶಾಲೆಗಳ ಮುಖ್ಯಗುರುಗಳಿಗೆ ಸಭೆ ನಡೆಸಿ ಸೂಚನೆ ನೀಡಲಾಗಿದೆ.ಪ್ರೌಢಶಾಲೆಗಳಲ್ಲಿ 10 ನೇ ತರಗತಿಯ ಫಲಿತಾಂಶ ಹೆಚ್ಚಿಸುವುದಕ್ಕೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ವಿದ್ಯಾರ್ಥಿಗಳಿಗೆ ವಿಶೇಷ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆಯಿಂದ ಹಮ್ಮಿಕೊಳ್ಳಲಾಗುವುದು. ವಿದ್ಯಾರ್ಥಿಗಳ ಹಾಜರಾತಿ ಹೆಚ್ಚಳಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ತಾಲೂಕಿನ ಎಲ್ಲಾ ಸರ್ಕಾರಿ ಶಾಲೆಗಳಿಗೆ ಶೇ 70 ರಷ್ಟು ಪಠ್ಯ ಪುಸ್ತಕಗಳನ್ನು ಪೂರೈಕೆ ಮಾಡಲಾಗಿದೆ ನಂತರದ ದಿನಗಳಲ್ಲಿ ಸಮವಸ್ತ್ರ ಸೇರಿದಂತೆ ಕಲಿಕಾ ಉಪಕರಣಗಳು ಪೂರೈಕೆಯಾದ ನಂತರ ವಿದ್ಯಾರ್ಥಿಗಳಿಗೆ ವಿತರಿಸಲಾಗುವುದು. ಕೋವಿಡ್ ಸೋಂಕಿನ ನಿರ್ವಹಣೆಗಾಗಿ ಶಾಲೆಗಳಲ್ಲಿ ಶಿಕ್ಷಕರೆ ಕೋವಿಡ್ ಲಕ್ಷಣಗಳಾದ ಕೆಮ್ಮು,ಜ್ವರ,ನೆಗಡಿ ಇರುವ ಮಕ್ಕಳನ್ನು ಪ್ರತ್ಯೇಕಿಸಿ ಕೂಡಿಸುವ ವ್ಯವಸ್ಥೆ ಮಾಡುವಂತೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

# ಮಳೆ ಹಾನಿ ಪರಿಹಾರ ಮತ್ತು ಶಾಶ್ವತ ಕ್ರಮಕೈಗೊಳ್ಳಲು ಅಶೋಕ್ ಆಗ್ರಹ

ಸಬೂಬು ಹೇಳದೆ ಹೆಚ್ಚು ಹಣ ಬಿಡುಗಡೆ ಮಾಡುವಂತೆಯೂ ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಮಳೆ ಹಾನಿಯಿಂದ ತೊಂದರೆಗೊಳಗಾದ ಪ್ರದೇಶಗಳಲ್ಲಿ ಸರ್ಕಾರ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ಕೈಗೊಳ್ಳಬೇಕು. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಹಾಗೂ ಸ್ಥಳೀಯ ಅಧಿಕಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಬೇಕು. ಮಳೆಯಿಂದ ಹಾಳಾಗಿರುವ ರಸ್ತೆ, ಸೇತುಗಳನ್ನು ದುರಸ್ಥಿಗೊಳಿಸಿ ಗ್ರಾಮಗಳ ಸಂಪರ್ಕಕ್ಕೆ ತುರ್ತು ಕ್ರಮ ಕೈಗೊಳ್ಳಬೇಕು. ಮಳೆಯಿಂದ ಸ್ಥಳಾಂತರಗೊಂಡ ಕುಟುಂಬಗಳಿಗೆ ಪರಿಹಾರ ಶಿಬಿರಗಳಲ್ಲಿ ಉತ್ತಮ ಆಹಾರ, ಶುದ್ಧ ಕುಡಿಯುವ ನೀರು, ವೈದ್ಯಕೀಯ ಸೇವೆಯನ್ನು ಒದಗಿಸಬೇಕು ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಮಳೆಯಿಂದ ಮನೆ, ಜಾನುವಾರು, ಬೆಳೆ ಹಾನಿಗೊಳಗಾದ ಅನಾಹುತಗಳ ಬಗ್ಗೆ ಕಾಲಮಿತಿಯಲ್ಲಿ ಸಮೀಕ್ಷೆ ನಡೆಸಿ ಪರಿಹಾರಗಳನ್ನು ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಮಳೆಯಿಂದ ರೈತರಿಗೆ ತಕ್ಷಣದ ಪರಿಹಾರ ವಿತರಿಸಬೇಕು. ಕೃಷಿ ಸಾಲ ಮನ್ನಾ ಮಾಡಲು ಮತ್ತು ಬಿತ್ತನೆ ಬೀಜ, ರಸಗೊಬ್ಬರಗಳ ಪೂರೈಕೆ ಖಾತರಿಪಡಿಸುವಂತೆಯೂ ಅವರು ಆಗ್ರಹಿಸಿದ್ದಾರೆ.

# ವಿಶ್ವ ಸ್ಕೀಜೋಪ್ರಿನಿಯಾ ದಿನ ಅರಿವು ಮೂಡಿಸುವ ಕಾರ್ಯಕ್ರಮ

ಪಡೆಯಬಹುದು, ಈ ಸಂಜೀವಿನಿ ಆನ್ ಲೈನ್ ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ,ಮುಖ್ಯ ವೈದ್ಯಧಿಕಾರಿಗಳಾದ ಡಾ.ಅರವಿಂದ ಕುಮಾರ .ಮಾನಸಿಕ ಆರೋಗ್ಯ ವಿಭಾಗದ ಸಂಯೋಜಕರಾದ ಅರುಣ ಕುಲಕರ್ಣಿ,ದೀಪಾ,ಮಂಜೂಳ, ಎಂ.ಡಿ.ಹುಲಿನಾಯಕ,ಕ್ಷೇತ್ರ ಆರೋಗ್ಯಶಿಕ್ಷಣಾಧಿಕಾರಿ ಬಾಲಪ್ಪನಾಯಕ,ಬಾಬು ಚಿನ್ನು ಸೇರಿದಂತೆ ಆಶಾ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಇದ್ದರು.

# ಅತಿಥಿ ಉಪನ್ಯಾಸಕ, ಶಿಕ್ಷಕರ ನೇಮಕಕ್ಕೆ ಜೂ.01ರಂದು ಪ್ರವೇಶ ಪರೀಕ್ಷೆ

**ರಾಯಚೂರು :** ಇಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿನ ಖಾಲಿ ಇರುವ ಹುದ್ದೆಗಳಿಗೆ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರು ಹಾಗೂ ಶಿಕ್ಷಕರ ನೇಮಕಾತಿ ಮಾಡುವ ಸಲುವಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಹಮ್ಮಿಕೊಳ್ಳಲಾಗಿದ್ದು, ಜೂನ್ 01ರಂದು ನಡೆಯುವ ಪರೀಕ್ಷಗೆ ಅಭ್ಯರ್ಥಿಗಳು ಪ್ರವೇಶ ಪತ್ರದೊಂದಿಗೆ ಹಾಜರಾಗಬಹುದಾಗಿದೆ.

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ನೇರ ನೇಮಕಾತಿ, ಬಡ್ತಿ, ವರ್ಗಾವಣೆ ಮೂಲಕ ಹುದ್ದೆ ಭರ್ತಿ ಮಾಡುವವರಿಗೆ ಅಥವಾ ಪ್ರಸಕ್ತ ಶೈಕ್ಷಣಿಕ ಸಾಲಿನ ಅಂತ್ಯವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ, ಮೌಲಾನಾ ಆಜಾದ್ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರು ಹಾಗೂ ಡಾ.ಎಪಿಜೆ, ಅಬ್ದುಲ್ ಕಲಾಂ ವಸತಿ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆ, ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರು ಹಾಗೂ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಅಹ್ವಾನಿಸಲಾಗಿದ್ದು, ಈ ಶಿಕ್ಷಕರು ಮತ್ತು ಉಪನ್ಯಾಸಕರನ್ನು ನಿಯಮಾನುಸಾರ ಆಯ್ಕೆ ಮಾಡುವ ಸಂಬಂಧ ಸಾಮಾನ್ಯ ಪರೀಕ್ಷೆಯನ್ನು ಜೂನ್ 01ರಂದು ನಡೆಸಲು ನಿಗದಿಗೊಳಸಲಾಗಿದೆ.

ಅಭ್ಯರ್ಥಿಗಳ ಪ್ರವೇಶ ಪತ್ರವನ್ನು ಜಿಲ್ಲಾ ಕಚೇರಿ ಹಾಗೂ ತಾಲ್ಲೂಕು ವಿಸ್ತರಣಾಧಿಕಾರಿಗಳು ಕಾರ್ಯಾಲಯ ಮಾನವಿ, ಸಿಂಧನೂರು, ಲಿಂಗಸೂಗೂರು ಹಾಗೂ ದೇವದುರ್ಗದಲ್ಲಿ ವಿತರಿಸಲಾಗುತ್ತಿದ್ದು, ಅಭ್ಯರ್ಥಿಗಳು 02 ಭಾವಚಿತ್ರಗಳೊಂದಿಗೆ ಪ್ರವೇಶ ಪತ್ರವನ್ನು ಮೇ.31ರ ಶನಿವಾರ ದೊಳಗಾಗಿ ಪಡೆದುಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ರಾಯಚೂರು ಮೊಬೈಲ್ ನಂ; 9731028420, ಮಾನವಿ, ಸಿರವಾರ ಮೊಬೈಲ್ ನಂ; 8867334785, ದೇವದುರ್ಗ ಮೊಬೈಲ್ ನಂ; 8884149056, ಲಿಂಗಸುಗೂರು, ಮಸ್ಕಿ ಮತ್ತು ಸಿಂಧನೂರು ಮೊಬೈಲ್ ನಂ; 9740871306, 8217621732 ಹಾಗೂ 8884977468ಗೆ ಸಂಪರ್ಕಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲಬುರಗಿ: 10.07 ಕೋಟಿ ರೂ.ವಂಚನೆ

**ಕಲಬುರಗಿ:**ಅಯ್ಯರವಾಡಿಯ ಗೋವಿಂದರಾಜ ವಾಗ್ಮೋರೆ ಮತ್ತು ಅವರ ಪತ್ನಿ ಭಾಗ್ಯಶ್ರೀ ಅವರು 38 ಜನ ವ್ಯಾಪಾರಿಸ್ಥರಿಂದ 8417.64 ಕ್ವಿಂಟಾಲ್ ತೊಗರಿ, 3481.15 ಕ್ವಿಂಟಾಲ್ ತೊಗರಿ ಬೇಳೆ, 100 ಕ್ವಿಂಟಾಲ್ ಕಡಲೆ ಬೇಳೆ, 500 ಕ್ವಿಂಟಾಲ್ ಬೂಸಾ (ಚುನ್ನಿ) ಮತ್ತು ನಗದು ಹಣ 52,88,840/–ರೂ.ಅರ್.ಟಿ.ಜಿ.ಎಸ್. ಮುಖಾಂತರ ತನ್ನ ಖಾತೆಗೆ




ಹಾಕಿಸಿಕೊಂಡು ಮತ್ತು ಗುಪ್ತಾ ಎಂಬುವವರ ಜಾಬ್ ವರ್ಕ ಖರ್ಚು ಸೇರಿ 10,07,83,000/–ರೂ.ಪಡೆದುಕೊಂಡು ಹಣ ಅಥವಾ ಮಾಲು ಮರಳಿ ಕೊಡದೇ ತಲೆಮರೆಸಿಕೊಂಡು ಹಣವನ್ನು ಸ್ವಂತಕ್ಕೆ ಬಳಸಿಕೊಂಡು, ಮೋಸ ವಂಚನೆ ಮಾಡಿದ್ದಾರೆ ಎಂದು ಶಿವಸಾಯಿ ಟ್ರೇಡಿಂಗ್ ಕಂಪನಿ ಜನರಲ್ ಮರ್ಚಂಟ್ ಕಮೀಷನ್ ಏಜೆಂಟ್ ಅಂಗಡಿ ಮಾಲೀಕ ಹಣಮಂತರಾಯ ಮಾಲಿ ಪಾಟೀಲ ಎಂಬುವವರು ಚೌಕ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ತನಿಖೆ ನಡೆದಿದೆ.

# ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಲು ಕರವೇ ಆಗ್ರಹ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು :** ಪಟ್ಟಣದಲ್ಲಿ ನಡೆದಿರುವ ರಾಷ್ಟ್ರೀಯ ಹೆದ್ದಾರಿ 150 ಎ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಆಗ್ರಹಿಸಿದರು.




ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದ ಅವರು, ಜೇವರ್ಗಿಯಿಂದ ಚಾಮರಾಜನಗರ ವರೆಗೆ 255.88 ಕೋಟಿ ರೂಪಾಯಿ ವೆಚ್ಚದಲ್ಲಿ ನಡೆದಿರುವ ಹೆದ್ದಾರಿ ಕಾಮಗಾರಿ ತಾಲ್ಲೂಕಿನಲ್ಲಿ ಹಾಡು ಹೋಗಿದೆ. ಲಿಂಗಸುಗೂರಿನಿಂದ ಮಸ್ಕಿವರೆಗೆ ಇದ್ದ ದ್ವಿಪಥ ರಸ್ತೆಯನ್ನು ಚತುಷ್ಪಥಕ್ಕೆ ಮೇಲ್ದರ್ಜೆಗೇರಿಸಿದ ಕಾಮ ಗಾರಿ 2023ರ ಜನೆವರಿ 18 ರಿಂದ ಕಾಮಗಾರಿ ಆರಂಭವಾಗಿದೆ. ಟೆಂಡರ್ ನಿಯಮದಂತೆ 2024ರ ಜುಲೈ 17ಕ್ಕೆ ಕಾಮಗಾರಿ ಮುಗಿಯಬೇಕು. ಆದರೆ, ಇದುವರೆಗೂ ಕಾಮಗಾರಿ ಮುಗಿಯದೇ ಇರುವ ಪರಿಣಾಮ ರಸ್ತೆಯ ಸಂಚಾರಕ್ಕೆ ತೊಂದರೆಯಾಗುತ್ತಿದೆ.

ಪಟ್ಟಣದಲ್ಲಿ ಮಸ್ಕಿ ಬೈಪಾಸ್ ಸರ್ವಿಸ್ ರಸ್ತೆಯನ್ನು ಪೂರ್ಣಗೊಳಿಸದೇ ಇರುವದು ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಮಂದಗತಿಯಲ್ಲಿ ಸಾಗಿರುವ ಕಾಮಗಾರಿಯನ್ನು ಕೂಡಲೇ ಪೂರ್ತಿಸಲು ಗುತ್ತಿಗೆದಾರರಿಗೆ ತಾಕೀತು ಮಾಡುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘಟನೆ ಅಧ್ಯಕ್ಷ ತಿಮ್ಮಾರೆಡ್ಡಿ ಮುನ್ನೂರು, ರಮೇಶ್ ಗುತ್ತೇದಾರ್, ಮೌನೇಶ್ ರೆಡ್ಡಿ, ಅಶೋಕ, ದೇವರಾಜ್, ಬಸವರಾಜ, ರಮೇಶ್, ಪ್ರಶಾಂತ, ಮಂಜುನಾಥ, ಶ್ರೀಕಾಂತ ಸೇರಿದಂತೆ ಇದ್ದರು.

# ಲಿಂಗಸುಗೂರು : ಬಜಾಜ್ ಫೈನಾನ್ಸ್ ದರೋಡೆಗೆ ವಿಫಲಯತ್ನ ,ಪೊಲೀಸರ ತನಿಖೆ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು :** ಪಟ್ಟಣದಲ್ಲಿರುವ ಬಜಾಜ್ ಫೈನಾನ್ಸದಲ್ಲಿ ಬುಧವಾರ ರಾತ್ರಿ ದರೋಡೆ ವಿಫಲ ಪ್ರಯತ್ನ ನಡೆದಿದ್ದು ಘಟನೆ ತಿಳಿದು ಪೊಲೀಸ್ ಭೇಟಿ ನೀಡಿ ತನಿಖೆ ನಡೆಸಿದ ಘಟನೆ ಜರುಗಿದೆ.




ಪಟ್ಟಣದಲ್ಲಿರುವ ಬಜಾಜ್ ಫೈನಾನ್ಸ್ ಗೆ ಬುಧವಾರ ರಾತ್ರಿ ದರೋಡೆಕೋರರ ತಂಡ ದರೋಡೆಗೆ ಯತ್ನಿಸಿ ಕಿಟಕಿಗಳು ಗ್ಲಾಸ್ ಗಳು ಮುರಿದು ಒಳನುಸುಳಿ ದರೋಡೆಗೆ ಯತ್ನ ನಡೆಸಿದೆ ಆದರೆ ಬಿಗಿಭದ್ರತೆಯನ್ನು ಭೇದಿಸದೆ ತಂಡ ವಿಫಲವಾದ ವಿಷಯ ತಿಳಿದುಬಂದಿದೆ ಸದರಿ ಫೈನಾನ್ಸದಲ್ಲಿ ಕೊಟ್ಯಂತರ ಮೌಲ್ಯದ ಬಂಗಾರ ಹಾಗೂ ಹಣ ಇರುವುದಾಗಿ ತಿಳಿದುಬಂದಿದ್ದು ಯಾವುದೆ ಹಾನಿ ಸಂಭವಿಸಿಲ್ಲ.

ಘಟನೆಯ ಬಗೆಗೆ ತಿಳಿಯುತ್ತಲೆ ಸ್ಥಳಕ್ಕೆ ಪೊಲೀಸ್ ಭೇಟಿ ನೀಡಿ ಪರಿಶೀಲನೆ ನಡೆಸಿತು ಅಲ್ಲದೆ ಬೆರಳಚ್ಚು ತಜ್ಞರು ಹಾಗೂ ಶ್ವಾನದಳವನ್ನು ತಂದು ಪರಿಸಿಲನೆ ನಡೆಸಲಾಗುತ್ತದೆ ಸಿಸಿಕ್ಯಾಮರಾದಲ್ಲಿ ಮುಖಚಹರೆ ಕಂಡುಬಂದಿದ್ದು ಶೀಘ್ರದಲ್ಲಿಯೆ ಪತ್ತೆಹಚ್ಚಲಾಗುವುದು ಎನ್ನುವ ಮಾತುಗಳು ಪೊಲೀಸ್ ವಲಯದಿಂದ ಕೇಳಿಬಂದಿವೆ.

# ಟಿಡಿಆರ್ ಆದೇಶಕ್ಕೆ ಸುಪ್ರೀಂ ತಡೆ

**ನವದೆಹಲಿ, ಮೇ 30–** ಬೆಂಗಳೂರು ಅರಮನೆ ಮೈದಾನದ ಭೂ ವಿವಾದ ಪ್ರಕರಣದಲ್ಲಿ ಕರ್ನಾಟಕ ಸರ್ಕಾರಕ್ಕೆ ಗುರುವಾರ ಸುಪ್ರೀಂ ಕೋರ್ಟ್‌ನಿಂದ ಮಧ್ಯಂತರ ಪರಿಹಾರ ಸಿಕ್ಕಿದೆ.

ಸುಮಾರು 3,400 ಕೋಟಿ ರೂ. ಮೌಲ್ಯದ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರ ಅಥವಾ ಟಿಡಿಆರ್ ಪ್ರಮಾಣ ಪತ್ರವನ್ನು ರಾಜಮನೆತನಕ್ಕೆ ಹಸ್ತಾಂತರಿಸುವ ಹಿಂದಿನ ಆದೇಶವನ್ನು ಸುಪ್ರೀಂ ಕೋರ್ಟ್ ತಡೆಹಿಡಿದಿದೆ. ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಮೂವರು ನ್ಯಾಯಾಧೀಶರ ಪೀಠವು ಈ ಆದೇಶವನ್ನು ಅಂಗೀಕರಿಸಿತು ಮತ್ತು ಪರಿಶೀಲನಾ ಅರ್ಜಿಯ ಮುಂದಿನ ವಿಚಾರಣೆಯನ್ನು ಜುಲೈ 21 ಕ್ಕೆ ಮತ್ತು ಮುಖ್ಯ ಸಿವಿಲ್ ಅರ್ಜಿಯ ವಿಚಾರಣೆಯನ್ನು ಆಗಸ್ಟ್ 18 ಕ್ಕೆ ಮುಂದೂಡಿದೆ.



ಇದು ಬಳ್ಳಾರಿ–ಜಯಮಹಲ್ ರಸ್ತೆ ಅಗಲೀಕರಣಕ್ಕಾಗಿ ಬೆಂಗಳೂರು ಅರಮನೆ ಮೈದಾನದಲ್ಲಿ ಭೂ ಸ್ವಾಧೀನಕ್ಕೆ ಸಂಬಂಧಿಸಿದ ಪ್ರಕರಣವಾಗಿದೆ. ರಾಜಮನೆತನಕ್ಕೆ ಟಿಡಿಆರ್ ನೀಡದಂತೆ ರಾಜ್ಯ ಸರ್ಕಾರ ಮಧ್ಯಂತರ ಅರ್ಜಿಯಲ್ಲಿ ಕೋರಿತ್ತು. ಆದರೆ, ಮೇ 22 ರಂದು ಸುಪ್ರೀಂ ಕೋರ್ಟ್ 3,400 ಕೋಟಿ ರೂ.ಗಳನ್ನು ನೀಡುವಂತೆ ಆದೇಶಿಸಿತ್ತು.

ರಾಜಮನೆತನಕ್ಕೆ ಟಿಡಿಆರ್. ಇದನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಪರಿಶೀಲನಾ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯನ್ನು ಪರಿಗಣಿಸಿರುವ ಸುಪ್ರೀಂ ಕೋರ್ಟ್, ಈಗ ಟಿಡಿಆರ್ ಹಸ್ತಾಂತರಕ್ಕೆ ತಡೆ ನೀಡಿದೆ. ಕರ್ನಾಟಕ ಸರ್ಕಾರದ ಪರವಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ಸಲ್ಲಿಸಿದ್ದ ಅರ್ಜಿಯನ್ನು ಆಲಿಸಿದ ನಂತರ ನ್ಯಾಯಾಲಯ ಈ ಆದೇಶವನ್ನು ನೀಡಿದೆ. ಕರ್ನಾಟಕ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ಕೆ. ಶಶಿ ಕಿರಣ್ ಶೆಟ್ಟಿ ಮತ್ತು ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ್ ಪಾಟೀಲ್ ಹಾಜರಾಗಿದ್ದರು.

**ಪ್ರಕರಣ ಹಿನ್ನಲೆ:** ಬೆಂಗಳೂರು ಅರಮನೆ ಮೈದಾನದ ಬಳಿ ರಸ್ತೆ ಅಗಲೀಕರಣಕ್ಕಾಗಿ ರಾಜ್ಯ ಸರ್ಕಾರ ಒಟ್ಟು 15.36 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಯೋಜಿಸಿತ್ತು. ಇದರ ವಿರುದ್ಧ ರಾಜಮನೆತನ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.ಎಕರೆಗೆ 200 ಕೋಟಿ ರೂ.ಗಳಂತೆ ಟಿಡಿಆರ್ ಆಗಿ 3,400 ಕೋಟಿ ರೂ.ಗಳ ಪರಿಹಾರವನ್ನು ಪಾವತಿಸಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಆದರೆ, ಟಿಡಿಆರ್ ಪಾವತಿಸಲು ಒಪ್ಪದ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಲು ಮುಂದಾಯಿತು. ಆದ್ದರಿಂದ, ಸುಗ್ರೀವಾಜ್ಞೆ ಮತ್ತು ಪರಿಹಾರವನ್ನು ಹೊರಡಿಸದ ರಾಜ್ಯ ಸರ್ಕಾರದ ವಿರುದ್ಧ ರಾಜಮನೆತನವು ನ್ಯಾಯಾಂಗ ನಿಂದನೆ ಅರ್ಜಿಯನ್ನು ಸಲ್ಲಿಸಿತ್ತು.

ನ್ಯಾಯಾಂಗ ನಿಂದನೆ ಅರ್ಜಿಯನ್ನು ಆಲಿಸಿದ ನಂತರ, ಸುಪ್ರೀಂ ಕೋರ್ಟ್ ಮೇ 22 ರಂದು ಟಿಡಿಆರ್ ಪಾವತಿಸಲು ಆದೇಶಿಸಿತ್ತು. ಕರ್ನಾಟಕ ಸರ್ಕಾರ ಆದೇಶವನ್ನು ಪರಿಶೀಲಿಸುವಂತೆ ಕೋರಿತ್ತು.

# ಗಾಂಜಾ ಸಾಗಿಸುತ್ತಿದ್ದ 8 ಜನರ ಬಂಧನ

**ಕೊಪ್ಪಳ, ಮೇ.30–** ಜಿಲ್ಲೆಯ ಗಂಗಾವತಿ ನಗರದಲ್ಲಿ ಮಾರಾಟ ಮಾಡಲು ಅಕ್ರಮವಾಗಿ ಸಾಗುಸುತ್ತಿದ್ದ 1.8 ಕೆ.ಜಿ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದ್ದು, 8 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮ್.ಎಲ್ ಅರಸಿದ್ದಿ ಹೇಳಿದ್ದಾರೆ.

ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಂಗಾವತಿಯ ಸರ್ಕಾರಿ ಐಟಿಐ ಕಾಲೇಜಿನ ಬಳಿ ಇರುವ ರಸ್ತೆಯಲ್ಲಿ ಎರಡು ಕಾರುಗಳಲ್ಲಿ ಸುಮಾರು 18.06 ಲಕ್ಷ ರೂ. ಮೌಲ್ಯದ ಹೈಡ್ರೋ ಗಾಂಜಾವನ್ನು ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿಯ ಮೇರೆಗೆ ಪೊಲೀಸರು ದಾಳಿ ಮಾಡಲಾಗಿತ್ತು. ಆರೋಪಿಗಳು ಗಾಂಜವನ್ನು ಥೈಲ್ಯಾಂಡ್ ನಿಂದ ಅಕ್ರಮವಾಗಿ ಭಾರತಕ್ಕೆ ತರಿಸಿಕೊಂಡಿದ್ದಾರೆ. ಆರೋಪಿಗಳ ಪೈಕಿ ಮೂವರು ಕೇರಳ ರಾಜ್ಯದವರಾಗಿದ್ದು, ಒಟ್ಟು ಎಂಟು ಜನರ ವಿರುದ್ಧ ಗಂಗಾವತಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ.



ಎರಡು ಕಾರುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಬಂಧಿತ ಆರೋಪಿಗಳನ್ನು ಸೌಜೇಶ ಕೆ.ಕೆ.(28), ಸಲಿಂ ಪಿ.ಪಿ.(27), ಬಿ.ದುರ್ಗಾ ಪ್ರಸಾದ್(27), ಬಾದ್ ಷಾ(32), ಮದನ್(26), ಸೂರ್ಯ ಪ್ರತಾಪ್ ರೆಡ್ಡಿ(19), ಮುಹಮ್ಮದ್ ಹಮೀದ್(22), ಮಣಿಕಂಠ(23) ಎಂದು ಗುರುತಿಸಲಾಗಿದೆ.

ಯುವ ಮಾರ್ಗ

ಶುಕ್ರವಾರ : 30-05-2025

# ಇಸ್ಲಾಂಗಿಂತ ಸನಾತನ ಧರ್ಮ ಪುರಾತನವಾದದ್ದು : ಜಮಾಲ್ ಸಿದ್ದಿಕಿ

**ನವದೆಹಲಿ–** ಸನಾತನ ಧರ್ಮವೂ ಇಸ್ಲಾಂಗಿಂತ ಪುರಾತನವಾದದ್ದು ಎಂದು ಬಿಜೆಪಿಯ ಅಲ್ಪಸಂಖ್ಯಾತ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ಜಮಾಲ್ ಸಿದ್ದಿಕಿ ಹೇಳಿದ್ದಾರೆ. ಸನಾತನ ಧರ್ಮ ಮತ್ತು ಇಸ್ಲಾಂ ನಡುವೆ ಬಲವಾದ ದೇವತಾ ಶಾಸ್ತ್ರೀಯ ಮತ್ತು ಸಾಂಸ್ಕೃತಿಕ ಸಮಾನಾಂತರಗಳಿವೆ ಎಂದು ಅವರು ಮಾಧ್ಯಮವೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಇಸ್ಲಾಮಿಕ್ ಸಂಪ್ರದಾಯದಲ್ಲಿ ಹಿಂದೂ ದೇವತೆಗಳ ಸ್ಥಾನಮಾನ ಮತ್ತು ಭಾರತದ ವೈವಿಧ್ಯಮಯ ಸಮುದಾಯಗಳ ಹೆಣೆದುಕೊಂಡಿರುವ ಪರಂಪರೆಯ ಬಗ್ಗೆ ಗಮನಾರ್ಹವಾದ ಹಕ್ಕುಗಳನ್ನು ನೀಡಿದ್ದಾರೆ.ಸನಾತನ ಧರ್ಮವು ಇಸ್ಲಾಂಗಿಂತ ಬಹಳ ಹಿಂದೆಯೇ ಬಂದಿತು ಎಂದು ಅವರು ಹೇಳಿದ್ದಾರೆ. ಎಲ್ಲಾ ಮುಸ್ಲಿಮರು ಭಗವಾನ್ ರಾಮನ ವಂಶಸ್ಥರು ಎಂದು ಅವರು ಹೇಳಿದರು. ಸನಾತನ ಧರ್ಮವು ಇಸ್ಲಾಂಗಿಂತ ಬಹಳ ಹಿಂದೆಯೇ ಬಂದಿತು. ಅದು ನಮ್ಮ ನಾಗರಿಕತೆಯ ಅಡಿಪಾಯ ಎಂದು ಸಿದ್ದಿಕಿ ಹೇಳಿದರು, ಭಾರತೀಯ ಸಂಸ್ಕೃತಿಯ ಆಳವಾದ ಐತಿಹಾಸಿಕ ಬೇರುಗಳನ್ನು ಒತ್ತಿ ಹೇಳಿದರು.

ರಾಮ ಮತ್ತು ಕೃಷ್ಣನಲ್ಲಿ ನಂಬಿಕೆಯಿಲ್ಲದ ಮುಸ್ಲಿಮರನ್ನು ಮುಸ್ಲಿಮರು ಎಂದು ಕರೆಯಲಾಗುವುದಿಲ್ಲ ಎಂದು ಹೇಳಿದರು, ಈ ಪೂಜ್ಯ ವ್ಯಕ್ತಿಗಳು ಇಸ್ಲಾಮಿಕ್ ಆಧ್ಯಾತ್ಮಿಕ ವಂಶಾವಳಿಯಲ್ಲಿ ಸ್ಥಾನ ಹೊಂದಿರಬಹುದು ಎಂದು ಪ್ರತಿಪಾದಿಸಿದರು. ಇಸ್ಲಾಮಿಕ್ ದೇವತಾಶಾಸ್ತ್ರದಲ್ಲಿ ತಮ್ಮ ಹೇಳಿಕೆಗಳನ್ನು ಆಧಾರವಾಗಿಟ್ಟುಕೊಂಡು, ಇಸ್ಲಾಂ ಒಬ್ಬ ಪ್ರವಾದಿಯನ್ನು ಮಾತ್ರವಲ್ಲ, ಅನೇಕರನ್ನು



ಒಪ್ಪಿಕೊಳ್ಳುತ್ತದೆ ಎಂದು ವಿವರಿಸಿದರು. ಕುರಾನ್ 25 ಪ್ರವಾದಿಗ ಳನ್ನು ಉಲ್ಲೇಖಿಸುತ್ತದೆ, ಆದರೆ ಹದೀಸ್ ಮತ್ತು ಸಂಪ್ರದಾಯದ ಪ್ರಕಾರ, ಪ್ರಪಂಚದಾದ್ಯಂತ 1,24,000 ಪ್ರವಾದಿಗಳನ್ನು ಕಳುಹಿಸಲಾಗಿದೆ. ಭಗವಾನ್ ರಾಮ ಮತ್ತು ಭಗವಾನ್ ಕೃಷ್ಣ ಅವರಲ್ಲಿ ಇರಲಿಲ್ಲ ಎಂದು ನಾವು ಹೇಗೆ ಹೇಳಬಹುದು ಎಂದು ಅವರು ಕೇಳಿದರು.

ಅವರು ದೇವರ ಸಂದೇಶವಾಹಕರಾಗಿರಬಹುದು. ಅವರು ಎಲ್ಲಾ ಮುಸ್ಲಿಮರು ಭಗವಾನ್ ರಾಮನ ವಂಶಸ್ಥರು ಎಂದು ಹೇಳುವ ಮೂಲಕ ಸಾಮಾನ್ಯ ವಂಶಾವಳಿಯನ್ನು ಸಹ ಹೇಳಿಕೊಂಡರು, ಇದು ಭಾರತದಲ್ಲಿ ಮುಸ್ಲಿಂ ಸಮುದಾಯದ ಬೇರುಗಳು ಪ್ರಾಚೀನ ಹಿಂದೂ ಸಂಪ್ರದಾಯದೊಂದಿಗೆ ಹೆಣೆದುಕೊಂಡಿವೆ ಎಂದು ಸೂಚಿಸುತ್ತದೆ.ಪೂಜಾ ವಿಧಾನಗಳು ಬದಲಾಗಿರಬಹುದು, ಆದರೆ ಆಧಾರವಾಗಿರುವ ಸಂಸ್ಕೃತಿ ಸ್ಥಿರವಾಗಿ ಉಳಿದಿದೆ ಎಂದು ಅವರು ಸ್ಪಷ್ಟಪಡಿಸಿದರು. ನಮ್ಮ ಗುರುತು ಇನ್ನೂ ಸನಾತನ ಎಂದು ಸಿದ್ದಿಕಿ ಹೇಳಿದರು.

# ಕಮಲ್ ಹಾಸನ್ ಚಿತ್ರ ನಿಷೇಧಕ್ಕೆ ಸಚಿವ ಶಿವರಾಜ್ ತಂಗಡಗಿ ಪತ್ರ

**ಬೆಂಗಳೂರು–** ತಮಿಳು ಹುಟ್ಟಿದ ಮೇಲೆ ಕನ್ನಡ ಹುಟ್ಟಿಲ್ಲ, ಬಹುಭಾಷಾ ನಟ ಕಮಲ್ ಹಾಸನ್ ನಮ್ಮ ಭಾಷೆ ಬಗ್ಗೆ ಆಡಿರುವ ಮಾತುಗಳು ಸಹನೀಯವಲ್ಲ. ಕೂಡಲೇ ಅವರು ತಮ್ಮ ಮಾತುಗಳನ್ನು ಹಿಂಪಡೆಯಲು ಮನವೊಲಿಸುವಂತೆ ಹ್ಯಾಟ್ರಿಕ್ ಹಿರೋ ಶಿವರಾಜ್ ಕುಮಾರ್ ಬಳಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಮನವಿ ಮಾಡಿದ್ದಾರೆ.

ಖಾಸಗಿ ಕಾರ್ಯಕ್ರಮ ಒಂದರಲ್ಲಿ ತಮ್ಮೊಂದಿಗೆ ವೇದಿಕೆ ಹಂಚಿಕೊಂಡ ಹಿರಿಯ ನಟ ಶಿವರಾಜ್ ಕುಮಾರ್ ಅವರ ಬಳಿ ಸಚಿವರು ನಟ ಕಮಲ್ ಹಾಸನ್ ಕನ್ನಡ ಭಾಷೆ ಬಗ್ಗೆ ಹಗುರವಾಗಿ ಮಾತನಾಡಿದ್ದನ್ನು ಪ್ರಸ್ತಾಪಿಸಿದರು. ಭಾಷೆ ವಿಚಾರದಲ್ಲಿ ಯಾರೇ ದೊಡ್ಡ ವ್ಯಕ್ತಿಯಾಗಿದ್ದರೂ ರಾಜಿಯಾಗುವ ಪ್ರಶ್ನೆ ಇಲ್ಲ. ನಮ್ಮ ಭಾಷೆ ಬಗ್ಗೆ ಹಗುರವಾಗಿ ಮಾತನಾಡಿದರೇ ಅದನ್ನು ಸಹಿಸಲು ಸಾಧ್ಯವಿಲ್ಲ. ಅಂತ ವಿಚಾರವನ್ನು ನಾವು ಪ್ರಶ್ನೆ ಮಾಡದೆ ಹಾಗೆಯೇ ಬಿಟ್ಟರೆ ನಮಗೆ ನಾವೇ ಮೋಸ ಮಾಡಿಕೊಂಡಂತೆ ಎಂದು ಸಚಿವರು ಹೇಳಿದ್ದಾರೆ.

ಶಿವರಾಜ್ ಕುಮಾರ್ ಚಲನಚಿತ್ರದ ದೊಡ್ಡ ಅಣ್ಣನಿದ್ದಂತೆ, ಕರ್ನಾಟಕಕ್ಕೆ ಅವರ ಕುಟುಂಬದ ಕೊಡುಗೆ ದೊಡ್ಡದಿದೆ. ಶಿವರಾಜ್ ಕುಮಾರ್ ಬಗ್ಗೆ ನಮಗೆ ಅಪಾರವಾದಂತ ವಿಶೇಷ ಗೌರವವಿದೆ. ಕಾಲೇಜು ದಿನಗಳಲ್ಲಿ ಅವರ ಚಿತ್ರಗಳನ್ನು ನೋಡಿ ಅಭಿಮಾನಿಯಾಗಿದ್ದೇನೆ ಎಂದರು. ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಗೆ ಈಗಾಗಲೇ ನಾನು ಪತ್ರ ಬರೆದು, ಕಮಲ್ ಹಾಸನ್ ಅವರ ಚಿತ್ರವನ್ನ ಬಿಡುಗಡೆ ಮಾಡದಂತೆ ನಿಷೇಧ ಹೇರಲು ಮನವಿ ಮಾಡಿಕೊಂಡಿದ್ದೇನೆ. ಶಿವರಾಜ್ ಕುಮಾರ್ ಅವರು ಅದೇ ಮಾದರಿಯಲ್ಲಿ ಹೆಜ್ಜೆ ಇಡಬೇಕು. ಈ ಬಗ್ಗೆ ಧ್ವನಿ ಎತ್ತಬೇಕು ಎಂದು ವಿನಮ್ರತೆಯಿಂದ ಮನವಿ ಮಾಡಿಕೊಳ್ಳುವುದಾಗಿ ಹೇಳಿದರು.



ಮತ್ತೊಂದೆಡೆ ಪತ್ರ ಬರೆದಿರುವ ಸಚಿವರು, ತಮಿಳು ಚಿತ್ರರಂಗದ ನಟ ಕಮಲ್ ಹಾಸನ್ ಅವರು ಇತ್ತೀಚಿಗೆ ಕಾರ್ಯಕ್ರಮವೊಂದರಲ್ಲಿ ಕನ್ನಡ ಭಾಷೆಯ ಕುರಿತಾಗಿ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಅವರು ಕನ್ನಡ ಭಾಷೆಯ ಕುರಿತಾಗಿ ಮಾತನಾಡಿರುವುದು ಸಮಸ್ತ ಕನ್ನಡಿಗರಿಗೆ ಹಾಗೂ ನನಗೆ ತೀವ್ರ ನೋವಾಗಿದೆ ಮತ್ತು ಕನ್ನಡಿಗರ ಭಾವನೆಗಳಿಗೆ ಧಕ್ಕೆಯುಂಟಾಗಿದೆ ಎಂದಿದ್ದಾರೆ.

ಕಮಲ್ ಹಾಸನ್ ಅವರು ಓರ್ವ ಹಿರಿಯ ನಟರಾಗಿ ಕನ್ನಡ ಭಾಷೆಯ ಹಲವು ಚಿತ್ರಗಳಲ್ಲಿ ನಟಿಸಿ ಕನ್ನಡ ಭಾಷೆಯ ಬಗ್ಗೆ ತಿಳಿದವರಾಗಿದ್ದು, ಈ ರೀತಿ ಮಾತನಾಡಿರುವುದು ಅವರಿಗೆ ಶೋಭೆ ತರುವಂತದ್ದಲ್ಲ. ಅವರಿಂದ ಇಂತಹ ಹೇಳಿಕೆಗಳನ್ನು ಸಹಿಸಲು ಸಾಧ್ಯವಿಲ್ಲ. ಆದ್ದರಿಂದ ಕಮಲ್ ಹಾಸನ್ ಅವರು ಕೂಡಲೇ ಕನ್ನಡಿಗರ ಕ್ಷಮೆಯಾಚಿಸಬೇಕು. ತಮಿಳು ಚಿತ್ರರಂಗದ ನಟ ಕಮಲ್ ಹಾಸನ್ ರವರು ರಾಜ್ಯದ ಜನರು/ ಕನ್ನಡಿಗರ ಕ್ಷಮೆಯಾಚಿಸದಿದ್ದಲ್ಲಿ ಅವರು ನಟಿಸಿರುವ ಚಲನ ಚಿತ್ರಗಳಿಗೆ ಕರ್ನಾಟಕದಲ್ಲಿ ಕೂಡಲೇ ನಿರ್ಬಂಧ ವಿಧಿಸಬೇಕೆಂದು ಈ ಮೂಲಕ ತಿಳಿಸುತ್ತೇನೆ ಎಂದಿದ್ದಾರೆ.

## 4400 ಮೀಟರ್ ರಿಲೇಯಲ್ಲಿ ಫೈನಲ್ ಪ್ರವೇಶಿಸಿದ ಭಾರತ





**ಗುಮಿ–** ರಿನ್ಸ್ ಜೋಸೆಫ್, ಧರ್ಮವೀರ್ ಚೌಧರಿ, ಮನು ತೆಕ್ಕಿನಲಿಲ್ ಸಾಜಿ ಮತ್ತು ಮೋಹಿತ್ ಕುಮಾರ್ ಅವರನ್ನೊಳಗೊಂಡ ಭಾರತದ ಪುರುಷರ 4400 ಮೀಟರ್ ರಿಲೇ ತಂಡವು ದಕ್ಷಿಣ ಕೊರಿಯಾದಲ್ಲಿ ನಡೆದ ಹೀಟ್‌ನಲ್ಲಿ ಅಗ್ರಸ್ಥಾನ ಪಡೆಯುವ ಮೂಲಕ ಫೈನಲ್‌ಗೆ ಲಗ್ಗೆ ಇಟ್ಟಿದೆ.

ಹೀಟ್ಸ್ ನಲ್ಲಿ, ಭಾರತವು ಚೀನಾವನ್ನು (3:06.79) ಹಿಂದಿಕ್ಕಿ ಮತ್ತು ಆತಿಥೇಯ ಕೊರಿಯಾವನ್ನು (3:10.05) ಹಿಂದಿಕ್ಕಿ 3:06.28 ಸೆಕೆಂಡುಗಳಲ್ಲಿ ಗುರಿ ತಲುಪಿದ ನಂತರ ಫೈನಲ್‌ಗೆ ನೇರ ಅರ್ಹತೆ ಗಳಿಸಿತು.

ಅಂತಿಮ ತಂಡವು ಶ್ರೀಲಂಕಾ, ಚೀನಾ ಮತ್ತು ಕಜಕಿಸ್ತಾನದಂತಹ ಪ್ರಬಲ ಸ್ಪರ್ಧಿಗಳನ್ನು ಒಳಗೊಂಡಿದೆ. ಶ್ರೀಲಂಕಾವು ಋತುವಿನ ಅತ್ಯಂತ ವೇಗದ 3:01.56 ಸಮಯವನ್ನು ಹೊಂದಿದೆ. ಮಹಿಳೆಯರ 10,000 ಮೀಟರ್ ಫೈನಲ್‌ನಲ್ಲಿ, ಭಾರತದ ಸಂಜೀವನಿ ಜಾಧವ್ 33:08.17 ಸೆಕೆಂಡುಗಳಲ್ಲಿ ಗುರಿ ತಲುಪಿ, ಋತುವಿನ ಅತ್ಯುತ್ತಮ ಸಮಯ 33:08.17 ಸೆಕೆಂಡುಗಳಲ್ಲಿ ಐದನೇ ಸ್ಥಾನ ಪಡೆದರು, ಸೀಮಾ 33:08.23 ಸೆಕೆಂಡುಗಳಲ್ಲಿ ಆರನೇ ಸ್ಥಾನ ಪಡೆದರು.ಈ ಸ್ಪರ್ಧೆಯಲ್ಲಿ ಕರ್ಘಾಕಿಸ್ತಾನದ ಡೈಸಿ ಜಿಪ್ಮೈಮಿ (30:48.44) ಪ್ರಾಬಲ್ಯ ಸಾಧಿಸಿದರು. ಜಪಾನ್‌ನ ರಿರಿರಾಕ್ ಹಿರೋನಿಕಾ (30: 56.32) ಮತ್ತು ಮಿಕುನಿ ಯಡಾ (31:12.21) ಅವರಿಗಿಂತ ಮುಂದಿದ್ದರು. ಭಾರತವು ಈವರೆಗೆ ಎರಡು ಚಿನ್ನ, ನಾಲ್ಕು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳನ್ನು ಒಳಗೊಂಡಂತೆ ಎಂಟು ಪೋಡಿಯಂ ಫಿನಿಶ್ ಗಳನ್ನು ಗಳಿಸಿದೆ.

## ಭಾರತ–ಪಾಕ್ ಯುದ್ಧ ತಪ್ಪಿಸಲು ಟ್ರಂಪ್‌ರಿಂದ ವ್ಯಾಪಾರ ಅಸ್ತ್ರ ಬಳಕೆ



**ವಾಷಿಂಗ್ಟನ್–**ಭಾರತ ಮತ್ತು ಪಾಕಿಸ್ತಾನ ನಡುವಿನ ಪೂರ್ಣ ಪ್ರಮಾಣದ ಯುದ್ಧವನ್ನು ತಪ್ಪಿಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವ್ಯಾಪಾರದ ಕೊಡುಗೆಯನ್ನು ಬಳಸಿದ್ದಾರೆ ಎಂದು ಅಮೆರಿಕದ ಆಡಳಿತ ನ್ಯೂಯಾರ್ಕ್ ಫೆಡರಲ್ ನ್ಯಾಯಾಲಯಕ್ಕೆ ಲಿಖಿತ ದಾಖಲೆಯಲ್ಲಿ ತಿಳಿಸಿದೆ.

ಎಲ್ಲಾ ಆಮದುಗಳ ಮೇಲೆ ಶೇ.10ರಷ್ಟು ಸುಂಕ ವಿಧಿಸುವುದು ಮತ್ತು ನಿರ್ದಿಷ್ಟ ದೇಶಗಳನ್ನು ಗುರಿಯಾಗಿಸಿ ಹೆಚ್ಚುವರಿ ಸುಂಕ ವಿಧಿಸುವ ಟ್ರಂಪ್ ಆಡಳಿತದ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ಸಂದರ್ಭ ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಡಬ್ಲ್ಯೂ. ಲುಟ್ನಿಕ್ ಮೇ 23ರಂದು ನೀಡಿದ್ದ ಹೇಳಿಕೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

ರಾಷ್ಟ್ರೀಯ ತುರ್ತು ಅಗತ್ಯದ ಸಂದರ್ಭದಲ್ಲಿ ಆರ್ಥಿಕ ನಿರ್ಬಂಧಗಳನ್ನು ವಿಧಿಸಲು ಸರ್ಕಾರಕ್ಕೆ ಅಧಿಕಾರ ನೀಡುವ ಕಾಯ್ದೆಯಡಿ ಸುಂಕ ಹೇರಿಕೆ ಕ್ರಮವನ್ನು ಟ್ರಂಪ್ ಬಳಸಿರುವುದನ್ನು ಈ ಹೇಳಿಕೆಯಲ್ಲಿ ಲುಟ್ನಿಕ್ ಸಮರ್ಥಿಸಿಕೊಂಡಿದ್ದಾರೆ. ಕೆಲವು ನಡವಳಿಕೆಗಳು ಗಂಭೀರ ಪರಿಣಾಮವನ್ನು ಉಂಟು ಮಾಡುತ್ತದೆ ಎಂಬ ಎಚ್ಚರಿಕೆಯನ್ನು ಇಂತಹ ಕ್ರಮಗಳು ವಿದೇಶಿ ಸರಕಾರಕ್ಕೆ ರವಾನಿಸುತ್ತವೆ.

ಉದಾಹರಣೆಗೆ, ಭಾರತ–ಪಾಕ್ ಯುದ್ಧ. ಎರಡು ಪರಮಾಣು ಶಸ್ತ್ರಸಜ್ಜಿತ ದೇಶಗಳ ನಡುವಿನ ಯುದ್ಧವನ್ನು ತಪ್ಪಿಸಿ ಕದನ ವಿರಾಮ ಒಪ್ಪಂದವನ್ನು ಸಾಧ್ಯವಾಗಿಸಿದ್ದು ಟ್ರಂಪ್ ಅವರು ಎರಡೂ ದೇಶಗಳಿಗೆ ನೀಡಿದ ವ್ಯಾಪಾರ ಕೊಡುಗೆ ಎಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

# ಭೂಮಿಗೆ ಅಪ್ಪಳಿಸಲಿವೆ ಮೂರು ಕ್ಷುದ್ರಗ್ರಹಗಳು

**ನವದೆಹಲಿ–** ಮುಂಬರುವ ಕೆಲವು ದಿನಗಳಲ್ಲಿ ಭೂಮಿಗೆ ಮೂರು ಕ್ಷುದ್ರಗ್ರಹಗಳು ಅಪ್ಪಳಿಸುವ ಸಾಧ್ಯತೆಗಳಿವೆ ಎಂದು ಖಗೋಳಶಾಸ್ತ್ರ ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಒಂದು ಕ್ಷುದ್ರಗ್ರಹ ಭೂಮಿಗೆ ಅಪ್ಪಳಿಸಿದರೆ ಇಡೀ ಒಂದು ನಗರವೇ ನಾಶವಾಗಬಲ್ಲದು ಎಂದು ಖಗೋಳ ವಿಜ್ಞಾನ ಮತ್ತು ಖಗೋಳ ಭೌತಶಾಸ್ತ್ರ ಜರ್ನಲ್‌ನಲ್ಲಿ ವಿಜ್ಞಾನಿಗಳ ಅಭಿಪ್ರಾಯ ಬರೆಯಲ್ಪಟ್ಟಿದೆ.

ಶುಕ್ರ ಗ್ರಹದ ಕಕ್ಷೆಯನ್ನು ಹಂಚಿಕೊಂಡಿರುವ 2020. 524522 ಮತ್ತು 2002 1 ಎಂಬ ಮೂರು ಬಾಹ್ಯಾಕಾಶ ಶಿಲೆಗಳು ಭೂಮಿಯತ್ತ ಅತಿ ವೇಗವಾಗಿ ಧಾವಿಸಿ ಬರತ್ತಿದ್ದು ಕೆಲವೇ ದಿನಗಳಲ್ಲಿ ಭೂಮಿಗೆ ಅಪ್ಪಳಿಸುವ ಸಾಧ್ಯತೆಗಳಿವೆ ಎಂದು ವರದಿಯಾಗಿದೆ.

ಬ್ರೆಜಿಲ್‌ನ ಸಾವೊ ಪಾಲೊ ಸ್ಟೇಟ್ ಯೂನಿವರ್ಸಿಟಿಯ ವ್ಯಾಲೆರಿಯೊ ಕಾರುಬಾ ನೇತೃತ್ವದ ಅಂತರರಾಷ್ಟ್ರೀಯ ಸಂಶೋಧನಾ ತಂಡದ ಪ್ರಕಾರ, ಈ ಕ್ಷುದ್ರಗ್ರಹಗಳು ಸೂರ್ಯನ ಪ್ರಜ್ವಲಿಸುವಿಕೆಯಲ್ಲಿ ಅಡಗಿಕೊಂಡಿವೆ. ಇದರಿಂದಾಗಿ ಭೂಮಿಯ ಮೇಲಿನ ದೂರದರ್ಶಕಗಳೊಂದಿಗೆ ಅವುಗಳನ್ನು ಪತ್ತೆಹಚ್ಚುವುದು ಅಸಾಧ್ಯವಾಗಿದೆ.ಅವುಗಳ ಪ್ರಸ್ತುತ ಮಾರ್ಗಗಳು ಅವುಗಳನ್ನು ಶುಕ್ರಕ್ಕೆ ಹತ್ತಿರ ತರದಿದ್ದರೂ, ಸಣ್ಣ ಗುರುತ್ವಾಕರ್ಷಣೆಯ ಅಡಚಣೆಯು ಸಹ ಅವುಗಳ ಕಕ್ಷೆಗಳನ್ನು ಭೂಮಿಯ ಕಡೆಗೆ ಬದಲಾಯಿಸಬಹುದು.

ಇದು ಸಂಭಾವ್ಯವಾಗಿ ವಿನಾಶಕಾರಿ ಪರಿಣಾಮಗಳನ್ನು ಬೀರುತ್ತದೆ ಎಂದು ಸಂಶೋಧಕರು ಎಚ್ಚರಿಸಿದ್ದಾರೆ. ಒಂದು ವೇಳೆ ಇವುಗಳಲ್ಲಿ ಒಂದು ಡಿಕ್ಕಿ ಹೊಡೆದರೆ, ಪರಿಣಾಮವು 3 ಕಿಲೋಮೀಟರ್ಗಳಿಗಿಂತ ಹೆಚ್ಚು ಅಗಲದ ಕುಳಿಯನ್ನು ಸೃಷ್ಟಿಸಬಹುದು ಮತ್ತು ಹಿರೋಷಿಮಾದ ಮೇಲೆ ಬೀಳಿಸಿದ ಪರಮಾಣು ಬಾಂಬ್ ಗಿಂತ ಒಂದು ಮಿಲಿಯನ್ ಪಟ್ಟು ಹೆಚ್ಚಿನ ಶಕ್ತಿಯನ್ನು ಬಿಡುಗಡೆ ಮಾಡಬಹುದು ಎಂದು ಫಾಕ್ಸ್ ನ್ಯೂಸ್ ವರದಿ ಮಾಡಿದೆ.



ಈ ಸಹ–ಕಕ್ಷೆಯ ಕ್ಷುದ್ರಗ್ರಹಗಳು ಶುಕ್ರನೊಂದಿಗಿನ ನಿಕಟ ಮುಖಾಮುಖಿಗಳಿಂದ ರಕ್ಷಿಸಲ್ಪಟ್ಟಿವೆ. ಆದರೆ ಭೂಮಿಯೊಂದಿಗಿನ ಅಲ್ಲ ಎಂದು ಸಂಶೋಧಕರು ಹೇಳಿದ್ದಾರೆ ಎಂದು ದಿ ಡೈಲಿ ಗ್ಯಾಲಕ್ಸಿ ಉಲ್ಲೇಖಿಸಿದೆ. ಈ ವಸ್ತುಗಳು ವಿಶೇಷವಾಗಿ ಅಪಾಯಕಾರಿ ಏಕೆಂದರೆ ಸೂರ್ಯನಿಗೆ ಹೋಲಿಸಿದರೆ ಅವುಗಳ ಸ್ಥಾನವು ಕಾಸ್ಮಿಕ್ ಬ್ಲೈಂಡ್ ಸ್ಪಾಟ್‌ನಂತೆ ಕಾರ್ಯನಿರ್ವಹಿಸುತ್ತದೆ. ಇದು ಕೊನೆಯ ಕ್ಷಣದ ಪತ್ತೆಹಚ್ಚುವಿಕೆಯನ್ನು ಅತ್ಯಂತ ಕಷ್ಟಕರವಾಗಿಸುತ್ತದೆ.ಅಂತಹ ಬೆದರಿಕೆಗಳನ್ನು ಮೇಲ್ವಿಚಾರಣೆ ಮಾಡುವ ಚಿಲಿಯಲ್ಲಿರುವ ರೂಬಿನ್ ವೀಕ್ಷಣಾಲಯವು ಯಾವುದೇ ಸಂಭಾವ್ಯ ಪರಿಣಾಮದ ಮೊದಲು ಕೇವಲ ಎರಡರಿಂದ ನಾಲ್ಕು ವಾರಗಳ ಸೂಚನೆಯನ್ನು ಹೊಂದಿರುತ್ತದೆ. ಶುಕ್ರನ ಬಳಿ ಮೀಸಲಾದ ಬಾಹ್ಯಾಕಾಶ ಆಧಾರಿತ ಕಾರ್ಯಾಚರಣೆಯು ಮಾತ್ರ ಈ ಗುಪ್ತ, ಸಂಭಾವ್ಯ ಅಪಾಯಕಾರಿ ಕ್ಷುದ್ರಗ್ರಹಗಳನ್ನು ಪರಿಣಾಮಕಾರಿಯಾಗಿ ಪತ್ತೆ ಮಾಡುತ್ತದೆ ಎಂದು ಅಧ್ಯಯನವು ಸೂಚಿಸುತ್ತದೆ.

## ರವಿಕುಮಾರ ಹೇಳಿಕೆಗೆ ಕೆಕೆಆರ್ ಡಿಬಿ ಅಧ್ಯಕ್ಷ ಡಾ ಅಜಯ್ ಸಿಂಗ್ ಖಂಡನೆ

**ಕಲಬುರಗಿ:** ಸದಾ ಕಾಲ ಕ್ರಿಯಾಶೀಲಾ ರಾಗಿದ್ದು ಜಿಲ್ಲೆಯ ಪ್ರಗತಿಗಾಗಿ ಕೆಲಸ ಮಾಡುತ್ತಿರುವ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರನ್ನ ಬಿಜೆಪಿ ಎಂ ಎಲ್ ಸಿ, ಮತ್ತು ಮೇಲ್ಮನೆ ವಿಪಕ್ಷದ ಮುಖ್ಯ ಸಚೇತಕ ಎನ್ ರವಿಕುಮಾರ್ ಅವರು ಮಾತಾನಾಡುವ ಭರದಲ್ಲಿ, ಜಿಲ್ಲಾಧಿಕಾರಿಯವರನ್ನು ಪಾಕಿಸ್ತಾನ ದಿಂದ ಬಂದವರು ಎಂದು ಮಾಡಿರುವ ನಿಂದನೆ ಅಕ್ಷಮ್ಯ ಅಪರಾಧ ಎಂದು ಕೆಕೆ ಆರ್ ಡಿ ಬಿ ಅಧ್ಯಕ್ಷರಾದ ಡಾ ಅಜಯ್ ಧರಂ ಸಿಂಗ್ ಖಂಡಿಸಿದ್ದಾರೆ.



ಜಿಲ್ಲಾಧಿಕಾರಿಗಳ ಮೇಲೆ ಈ ಕುರಿತು ಹೇಳಿಕೆ ನೀಡಿರುವ ರವಿಕುಮಾರ್ ಅವರು, ಛಲವಾದಿ ನಾರಾಯಣಸ್ವಾಮಿ ಪ್ರಕರಣದಲ್ಲಿ ಪಾಠ ಕಲಿಯದೆ, ತಮ್ಮನ್ನು ತಾವು ತಿದ್ದಿಕೊಳ್ಳದೆ ಬಿಜೆಪಿ ಮುಖಂಡರು ಸಾಮಾಜಿಕ ಜ್ಞಾನ ಮತ್ತು ಒಬ್ಬ ಅಧಿಕಾರಿಯ ಬಗ್ಗೆ ಮಾತನಾಡಬೇಕಾದರೆ ಇರಬೇಕಾದ ಸಾಮಾನ್ಯ ಜ್ಞಾನವೂ ಇಲ್ಲದೆ ಸುಮ್ಮನೆ ಮಾತನಾಡುವ ಚಟಕ್ಕೊಸ್ಕರ ಮಾತನಾಡಿದ್ದಾರೆ. ಅವರಿಗೆ ನಾಡಿನ ಜನರೇ ತಕ್ಕ ಪಾಠ ಕಳಿಸುತ್ತಾರೆ ಎಂದು ಹೇಳಿದ್ದಾರೆ.ಬಿಜೆಪಿ ನಾಯಕರಿಗೆ ಪಾಕಿಸ್ತಾನದ ಹೆಸರು, ಅಲ್ಪಸಂಖ್ಯಾತರ ಹೆಸರು ಹೇಳದೆ ಮಾತಾಡಲಿಕ್ಕೆ ಬರುವುದಿಲ್ಲ ಎಂಬಂತಾಗಿದೆ.ಕಾಂಗ್ರೆಸ್ ಸರ್ಕಾರದ ಜನಪರ ಕಾರ್ಯಕ್ರಮಗಳು ತುಂಬಾ ಗಮನ ಸೆಳೆದಿವೆ, ಬಿಜೆಪಿಯವರು ಜನರ ಗಮನ ಸೆಳೆಯಲು ಮಾತಾಡಲು ಬೇರೇನೂ ವಿಷಯವಿಲ್ಲ ಹಾಗಾಗಿ ಬಾಯಿಗೆ ಬಂದದ್ದು ಬಡಬಡಿಸು ತ್ತಿದ್ದಾರೆ ಎಂದು ಡಾ ಅಜಯ್ ಸಿಂಗ್ ಬಿಜೆಪಿಗರಿಗೆ ಮಾತಲ್ಲಿ ಕುಟುಕಿದ್ದಾರೆ. ಬಿಜೆ ಪಿಯವರು ಇಷ್ಟು ದಿನ ರಾಜಕೀಯ ವಾಗಿ ರಾಜಕಾರಣಿಗಳಿಗೆ ಟೀಕೆ ಮಾಡುತ್ತಿದ್ದ ರು. ಈಗ ಟಿಕೆಯನ್ನು ಐಎಎಸ್ ಅಧಿಕಾರಿ ಗಳಿನ್ನು ಟೀಕೆ ಮಾಡುತ್ತಿದ್ದಾರೆ.

ಸೇನಾಧಿಕಾರಿ ಸೋಫಿಯಾ ಖುರೆಷಿ ಗೆ ಭಯೋತ್ಪಾದಕರ ಸಹೋದರಿ ಎಂದವರು ಕಲಬುರಗಿಯಲ್ಲಿ ಇನ್ನೂ ನಾಲಗೆ ತುಂಬಾ ಉದ್ದ ಹರಿಬಿಟ್ಟರು, ಇದು ಬಿಜೆಪಿಗರ ಅಜ್ಞಾನಕ್ಕೆ ಹಿಡಿದ ಕನ್ನಡಿ, ಒಂದು ಸಮುದಾಯವನ್ನು ಗುರಿ ಮಾಡಿ ದ್ವೇಷದ ಮತ್ತು ಸೇಡಿನ ರಾಜಕೀಯಕ್ಕೆ ಹಿಡಿದ ಕನ್ನಡಿ ಎಂದು ಡಾ ಅಜಯ್ ಸಿಂಗ್ ಟೀಕಿಸಿದ್ದಾರೆ.

ಬಿಜೆಪಿಗರ ಈ ಧೋರಣೆ ಅಧಿಕಾರಿಗಳ ನೈತಿಕ ಸ್ಥೈರ್ಯವನ್ನು ಕುಗ್ಗಿಸುವ ಪ್ರಯತ್ನವಾಗಿದೆ. ಕಲಬುರಗಿಯ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ರವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮುರವರು ಅತ್ಯುತ್ತಮ ಚುನಾವಣಾ ಅಧಿಕಾರಿಯ ಪ್ರಶಸ್ತಿಯನ್ನುನೀಡಿ ಗೌರವಿಸಿದ್ದಾರೆ.

ಇದನ್ನು ಅರಿತೋ ಅರಿಯದೆಯೋ, ಜಾಣ ಕುರುಡು ತನದಿಂದಲೋ, ಅಧಿಕಾರಿ ಬಗ್ಗೆ ಬೇಕಾಬಿಟ್ಟಿ ನಾಲಿಗೆ ಹರಿ ಬಿಟ್ಟಿದ್ದು ಖಂಡನಿಯ. ಅಧಿಕಾರಿ ಧರ್ಮಧಾರಿತ ಕೆಲಸ ಮಾಡೋದಿಲ್ಲ ಅನ್ನೋದು ಮೊದಲು ತಿಳಿದುಕೊಳ್ಳಬೇಕು ಎಂದು ಡಾ ಅಜಯ್ ಸಿಂಗ್ ಕಿವಿ ಮಾತು ಹೇಳಿದ್ದಾರೆ.

## ಟೀಕಾಕಾರಿಗೆ 'ಗುಡ್ ನೈಟ್' ಹೇಳಿದ ತರೂರ್

**ಪನಾಮ ನಗರ–** ತಮ್ಮ ಸರ್ಜಿಕಲ್ ಸ್ಟೈಕ್ ಹೇಳಿಕೆಗಳ ಬಗ್ಗೆ ಕಾಂಗ್ರೆಸ್ ನಾಯಕರು ವಾಗ್ದಾಳಿ ನಡೆಸುತ್ತಿರುವ ನಡುವೆಯೇ, ಪಕ್ಷದ ನಾಯಕ ಶಶಿ ತರೂರ್ ಎಲ್‌ಒಸಿಯಾದ್ಯಂತ ಭಾರತೀಯ ಶೌರ್ಯದ ಬಗ್ಗೆ ತಮ್ಮ ಅಜ್ಞಾನವನ್ನು ವ್ಯಕ್ತಪಡಿಸುತ್ತಿರುವ ಉತ್ಸಾಹಿಗಳು ಭಯೋತ್ಪಾದಕ ದಾಳಿಗಳಿಗೆ ಪ್ರತೀಕಾರದ ಬಗ್ಗೆ ಮಾತ್ರ ಮಾತನಾಡುತ್ತಿದ್ದಾರೆ ಮತ್ತು ಹಿಂದಿನ ಯುದ್ಧಗಳ ಬಗ್ಗೆ ಅಲ್ಲ ಎಂದು ಹೇಳಿದ್ದಾರೆ.



ತಮ್ಮ ಹೇಳಿಕೆಗಳಿಗೆ ಮೊದಲು ಇತ್ತೀಚಿನ ವರ್ಷಗಳಲ್ಲಿ ಮಾತ್ರ ನಡೆದ ಹಲವಾರು ದಾಳಿಗಳನ್ನು ಉಲ್ಲೇಖಿಸಲಾಗಿದೆ ಎಂದು ತರೂರ್ ಹೇಳಿದರು. ಈ ಸಮಯದಲ್ಲಿ ಹಿಂದಿನ ಭಾರತೀಯ ಪ್ರತಿಕ್ರಿಯೆಗಳು ಎಲ್‌ಒಸಿ ಮತ್ತು ಐಬಿಗೆ ಭಾರತದ ಜವಾಬ್ದಾರಿಯುತ ಗೌರವದಿಂದ ಸಂಯಮ ಮತ್ತು ನಿರ್ಬಂಧಿತವಾಗಿವೆ. ಐದು ದೇಶಗಳಿಗೆ ಬಹುಪಕ್ಷಗಳ ನಿಯೋಗವನ್ನು ಮುನ್ನಡೆಸುತ್ತಿರುವ ಕಾಂಗ್ರೆಸ್ ನಾಯಕರು ಇಲ್ಲಿ ಮಾತನಾಡುತ್ತಾ, ಮೊದಲ ಬಾರಿಗೆ ಭಾರತವು ಭಯೋತ್ಪಾದಕ ನೆಲೆಯ ಮೇಲೆ ಸರ್ಜಿಕಲ್ ಸ್ಟೈಕ್ ನಡೆಸಲು ಭಾರತ ಮತ್ತು ಪಾಕಿಸ್ತಾನದ ನಡುವಿನ ಎಲ್ ಸಿಯನ್ನು ಉಲ್ಲಂಘಿಸಿದಾಗ ಅದು ನಾವು ಹಿಂದೆಂದೂ ಮಾಡದ ಕೆಲಸ ಎಂದು ಹೇಳಿರುವುದಾಗಿ ವರದಿಯಾಗಿದೆ.

ಪಕ್ಷದ ಸಹೋದ್ಯೋಗಿ ಉದಿತ್ ರಾಜ್ ಅವರನ್ನು ಬಿಜೆಪಿಯ ಸೂಪರ್ ವಕ್ತಾರರನ್ನಾಗಿ ಮಾಡಬೇಕೆಂದು ಹೇಳಿದ್ದಕ್ಕಾಗಿ ಕಾಂಗ್ರೆಸ್ ಅವರ ವಿರುದ್ಧ ವಾಗ್ದಾಳಿ ನಡೆಸಿತ್ತು.ಪನಾಮದಲ್ಲಿ ದೀರ್ಘ ಮತ್ತು ಯಶಸ್ವಿ ದಿನದ ನಂತರ, ನಾನು ಮಧ್ಯರಾತ್ರಿ ಇಲ್ಲಿಗೆ ಬಂದು ಆರು ಗಂಟೆಗಳಲ್ಲಿ ಕೊಲಂಬಿಯಾದ ಬೊಗೋಟಾಗೆ ತೆರಳಬೇಕಾಗಿದೆ. ಆದ್ದರಿಂದ ನನಗೆ ನಿಜವಾಗಿಯೂ ಇದಕ್ಕಾಗಿ ಸಮಯವಿಲ್ಲ ಎಲ್‌ಓಸಿಯಾದ್ಯಂತ ಭಾರತೀಯ ಶೌರ್ಯದ ಬಗ್ಗೆ ನನ್ನ ಅಜ್ಞಾನದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸುವ ಆ ಉತ್ಸಾ ಹಿಗಳಿಗೆ ನಾನು ಸ್ಪಷ್ಟವಾಗಿ ಭಯೋತ್ಪಾದಕ ದಾಳಿಗಳಿಗೆ ಪ್ರತೀಕಾರದ ಬಗ್ಗೆ ಮಾತ್ರ ಮಾತನಾಡುತ್ತಿದ್ದೆ ಮತ್ತು ಹಿಂದಿನ ಯುದ್ಧಗಳ ಬಗ್ಗೆ ಅಲ್ಲ. ನನ್ನ ಹೇಳಿಕೆಗಳಿಗೆ ಮೊದಲು ಇತ್ತೀಚಿನ ವರ್ಷಗಳಲ್ಲಿ ಮಾತ್ರ ನಡೆದ ಹಲವಾರು ದಾಳಿಗಳ ಉಲ್ಲೇಖವಿತ್ತು, ಈ ಸಮಯದಲ್ಲಿ ಹಿಂದಿನ ಭಾರತೀಯ ಪ್ರತಿಕ್ರಿಯೆಗಳು ಎಲ್‌ಒಸಿ ಮತ್ತು ಐಬಿಗೆ ನಮ್ಮ ಜವಾಬ್ದಾರಿಯುತ ಗೌರವದಿಂದ ಸಂಯಮ ಮತ್ತು ನಿರ್ಬಂಧಿತವಾಗಿದ್ದವು ಎಂದು ತರೂರ್ ಹೇಳಿದ್ದಾರೆ.

ಆದರೆ ಎಂದಿನಂತೆ, ವಿಮರ್ಶಕರು ಮತ್ತು ಟ್ರೋಲ್‌ಗಳು ತಮಗೆ ಸೂಕ್ತವೆನಿಸಿದ ರೀತಿಯಲ್ಲಿ ನನ್ನ ಅಭಿಪ್ರಾಯಗಳು ಮತ್ತು ಪದಗಳನ್ನು ವಿರೂಪಗೊಳಿಸಲು ಸ್ವಾಗತಾರ್ಹ. ನನಗೆ ನಿಜವಾಗಿಯೂ ಉತ್ತಮ ಕೆಲಸಗಳಿವೆ. ಶುಭರಾತ್ರಿ ಎಂದು ಅವರು ಎಕ್ಸ್ ಮಾಡಿದ್ದಾರೆ.

# ಮಳೆಗೆ ಜೋಳ ಹಾನಿ: ರೈತರ ಬದುಕು ಚಿಂತಾಜನಕ

ಯುವ ಮಾರ್ಗ ಸುದ್ದಿ

**ಮಾನ್ವಿ :** ತಾಲೂಕಿನಾದ್ಯಂತ ಒಂದು ವಾರದಿಂದ ಜಿಟಿ ಜಿಟಿ ಮಳೆ, ಸೂರ್ಯ ಹೊರಬರದಂತೆ ಮುಚ್ಚಿರುವ ಮೋಡ, ಇದರಿಂದ ದಾಸ್ತಾನು ಮಾಡಿದ್ದ ಜೋಳದ ರಾಶಿಗಳಲ್ಲಿ ಹುಳ, ಕೆಲ ರಾಶಿಗಳಲ್ಲಿ ಮೊಳಕೆಯೊಡೆದ ಜೋಳ. ಹಿಂಗಾರಿನಲ್ಲಿ ಜೋಳ ಬೆಳೆದ ರೈತರ ಗೋಳು ಹೇಳತೀರದು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬೆಂಬಲ ಬೆಲೆ ನೀಡಿ ಜೋಳ ಖರೀದಿಸುವ ಭರವಸೆ ನೀಡಿದ್ದವು. ಏಪ್ರಿಲ್ ತಿಂಗಳಲ್ಲಿಯೇ ಖರೀದಿ ಕೇಂದ್ರಗಳಲ್ಲಿ ನೋಂದಣಿ ಮಾಡಿ ನಾಳೆ ಖರೀದಿಸುತ್ತಾರೆ. ನಾಡಿದ್ದು ಖರೀದಿಸುತ್ತಾರೆ ಎಂದು ಭರವಸೆಯಿಟ್ಟು ರೈತರು ಕಾಯುತ್ತಿದ್ದರು. ಇತ್ತೀಚಿಗೆ ಕೇಂದ್ರ ಉಗ್ರಾಣ ನಿಗಮದ ಅಧಿಕಾರಿಗಳು ಜೋಳದಲ್ಲಿ ನುಸಿ ಮತ್ತು ಹುಳಗಳಿವೆ ಎಂದು ಖರೀದಿ ಮಾಡಲು ನಿರಾಕರಿಸಿದ್ದಕ್ಕೆ ರೈತರು ಅತ್ತ ಮಾರುಕಟ್ಟೆಯಲ್ಲಿ ಮಾರದೆ, ಇತ್ತ ಖರೀದಿ ಕೇಂದ್ರಕ್ಕೂ ಮಾರಾಟ ಮಾಡದೆ ಜೋಳದ ರಾಶಿ ಮನೆ ಮುಂದೆಯೋ, ಹೊಲದಲ್ಲಿಯೋ ಹಾಕಿಕೊಂಡು ತ್ರಿಶಂಖು ಪರಿಸ್ಥಿತಿ ಅನುಭವಿಸುತ್ತಿದ್ದಾರೆ.

ತಾಲೂಕಿನ ಹಳ್ಳದ ನೀರಿನಿಂದ ಜೋಳ ಬೆಳೆದ ಉಟಕನೂರು, ದೋತರಬಂಡಿ, ತಡಕಲ್, ಜೀನೂರು,ಪೋತ್ನಾಳ, ಮುದ್ದಂಗುಡ್ಡಿ, ಖರಾಬದಿನ್ನಿ, ದೇವಿಪುರ, ಈರಲಗಡ್ಡಿ, ಹಿರೇಕೋಟ್ನೆಕಲ್, ಜಾನೇಕಲ್, ಅಮರಾವತಿ, ನಂದಿಹಾಳ, ಸೇರಿದಂತೆ ಹೀಗೆ ಸುಮಾರು 35ಕ್ಕೂ ಅಧಿಕ ಹಳ್ಳಿಗಳ ರೈತರು ಜೋಳ ಖರೀದಿ ಕೇಂದ್ರದ ಸೌಕರ್ಯದಿಂದ ವಂಚಿತರಾಗಿದ್ದಾರೆ.



ಸಂಗ್ರಹಿಸಿಟ್ಟ ಜೋಳದ ರಾಶಿಯಲ್ಲಿ ಮೊಳಕೆಯೊಡಿದಿರುವುದು



ರೈತರು ತಮ್ಮ ಜಮೀನುಗಳಲ್ಲಿ ಶೇಖರಿಸಿಟ್ಟಿದ್ದ ಜೋಳದ ಚೀಲಗಳು ಮಳೆಗೆ ತೊಯ್ದಿದ್ದರಿಂದ ಜೋಳದ ಕಾಳುಗಳು ಮೊಳಕೆ ಬಂದಿದ್ದು ತೀವ್ರ ನಷ್ಟ ಅನುಭವಿಸುವಂತಾಗಿದೆ. ಹಿಂಗಾರಿನಲ್ಲಿ ಬೆಳೆದ ಜೋಳವನ್ನು ಫೆಬ್ರವರಿಯಲ್ಲಿ ಕೊಯ್ಲು ಮಾಡಿದ್ದು ಜಮೀನಿನಲ್ಲಿ ಜೋಳದ ಚೀಲಗಳನ್ನು ಶೇಖರಿಸಿಡಗಿತ್ತು.

**ನಮ್ಮ 6 ಎಕರೆಯಲ್ಲಿ ಜೋಳ ಬೆಳೆದಿದ್ದು ಈ ಬಾರಿ ಉತ್ತಮವಾಗಿ ಎಕರೆಗೆ 35 ಕ್ವಿಂಟಾಲ್ ನಂತೆ ಇಳುವರಿ ಬಂದಿದ್ದು 6 ಎಕರೆಯಲ್ಲಿ ಒಟ್ಟು 210 ಕ್ವಿಂಟಾಲ್ ವರೆಗೆ ಈ ಬಾರಿ ಜೋಳವನ್ನು ಬೆಳೆದಿದ್ದೇವು ಜೋಳವನ್ನು ಮಾರಾಟ ಮಾಡುವುದಕ್ಕೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಇಲ್ಲದೆ ಇರುವುದರಿಂದ ಸರ್ಕಾರದಿಂದ ಪ್ರಾರಂಭಿಸಲಾದ ಜೋಳ ಖರೀದಿ ಕೇಂದ್ರದಲ್ಲಿ ಮಾರಾಟ ಮಾಡುವುದಕ್ಕೆ ಜಮೀನಿನಲ್ಲಿ ಜೋಳವನ್ನು ಸಂಗ್ರಹಿಸಿದ್ದೇವು ಅದರೆ ಬೆಂಬಲ ಬೆಲೆಯಲ್ಲಿ ಜೋಳವನ್ನು ಖರೀದಿಸುವುದಕ್ಕೆ ಸರ್ಕಾರದಿಂದ ನೊಂದಾಣಿಗೆ ಪರವಾನಿಗೆ ನೀಡುವುದಕ್ಕೆ ವಿಳಂಬ ಮಾಡಿದರಿಂದ ಜಮೀನಿನಲ್ಲಿ ಸಂಗ್ರಹಿಸಿದ ಜೋಳ ನಾಲ್ಕೈದು ದಿನಗಳಿಂದ ಬಂದ ಮಳೆಯಿಂದಾಗಿ ಹಾಳಗಿದೆ ಪ್ರತಿ ಎಕರೆಗೆ ಜೋಳವನ್ನು ಬೆಳೆಯುವುದಕ್ಕೆ 30 ಸಾವಿರದವರೆಗೆ ಖರ್ಚುಮಾಡಲಾಗಿದ್ದು 6 ಎಕರೆಗೆ 1ಲಕ್ಷ 80 ಸಾವಿರ ರೂ ವರೆಗೆ ಕೃಷಿ ವೆಚ್ಚವಾಗಿದೆ. ಕೂಡಲೇ ಸರ್ಕಾರ ಜೋಳ ಖರೀದಿ ಮಾಡಬೇಕು ಹಾಗೂ ಸರ್ಕಾರದಿಂದ ಕೂಡಲೆ ರೈತರಿಗೆ ಆಗಿರುವ ಬೆಳೆ ನಷ್ಟ ಕುರಿತು ಸಮೀಕ್ಷೆ ನಡೆಸಿ ಅಗತ್ಯ ಪರಿಹಾರವನ್ನು ನೀಡಿದಲ್ಲಿ ಅನುಕೂಲವಾಗುತ್ತದೆ ಎನ್ನುತ್ತಾರೆ.**

**– ಚೌಡಯ್ಯ, ರೈತ ದೇವಿಪುರ**

## ಜೂ.1ರಿಂದ ಉಚಿತ ಯೋಗ ಶಿಬಿರ : ಅನ್ನದಾನಯ್ಯ ಸ್ವಾಮಿ


ಯುವ ಮಾರ್ಗ ಸುದ್ದಿ



**ಮಾನ್ವಿ:** ಪಟ್ಟಣದ ಯೋಗಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ ವತಿಯಿಂದ 11 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಪಟ್ಟಣದ ವಿಜಯನಗರದಲ್ಲಿನ ಯೋಗಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ ಸಭಾಂಗಣದಲ್ಲಿ ಜೂ.1ರಿಂದ ಜೂ.17 ರವರೆಗೆ ಉಚಿತ ಯೋಗ ಶಿಬಿರ ಹಾಗೂ ಯೋಗ ಚಿಕಿತ್ಸೆ, ಆಹಾರ ಚಿಕಿತ್ಸೆ, ಯೋಗಕ್ರೀಯಾ ವಿಧಾನಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ ಆಸಕ್ತರು ಯೋಗಗುರುಗಳಾದ ಅನ್ನದಾನಯ್ಯ ಸ್ವಾಮಿಯವರನ್ನು ಸಂಪರ್ಕಿಸಿ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳುವಂತೆ ಯೋಗಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ನ ಪ್ರಕಟಣೆಯಲ್ಲಿ ಕೋರಲಾಗಿದೆ ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ 9972345711 ಸಂಪರ್ಕಿಸಬಹುದಾಗಿದೆ.

## ಸಮಾಜ ಕಲ್ಯಾಣ ಇಲಾಖೆಯಿಂದ ಹಾಸ್ಟೆಲ್‌ಗಳಿಗೆ ಅರ್ಜಿ ಆಹ್ವಾನ

ಯುವ ಮಾರ್ಗ ಸುದ್ದಿ



**ಮಾನ್ವಿ :** 2025-26 ಸಾಲಿನ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಿರ್ವಹಣೆ ಆಗುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ನವೀಕರಣದಲ್ಲಿ ದಾಖಲಾದ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಯಗಳಿಗೆ ಜೂನ್ 01 ರಿಂದ ಹಾಜರಾಗಬೇಕು ಹಾಗೂ 2025- 26ನೇ ಸಾಲಿನಲ್ಲಿ ಹೊಸದಾಗಿ ಅರ್ಜಿಯನ್ನು ಸಲ್ಲಿಸಲು ಅಹ್ವಾನಿಸಲಾಗಿರುತ್ತದೆ ಅರ್ಹ ವಿದ್ಯಾರ್ಥಿಗಳು ಇಲಾಖಾ ವೆಬ್ ಸೈಟ್ https://sw.kar.nic.in ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ 2 ಪ್ರತಿಗಳನ್ನು ಸಂಬಂಧಪಟ್ಟ ಕಛೇರಿಗೆ ದೃಢೀಕರಿಸಿ ದಾಖಲೆಗಳೊಂದಿಗೆ ಸಲ್ಲಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿಯಾದ ನಟರಾಜ್ ಮಸ್ಕಿ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ಕೃಷ್ಣಾ ನದಿಯ ಒಳ ಹರಿವು ಹೆಚ್ಚಳ: ನದಿಪಾತ್ರದ ಗ್ರಾಮಸ್ಥರಿಗೆ ವಿಶೇಷ ಸೂಚನೆ

ಯುವ ಮಾರ್ಗ ಸುದ್ದಿ

**ರಾಯಚೂರು:** ಮುಂಗಾರು ಹಂಗಾಮಿನ 2025-26ನೇ ಸಾಲಿನಲ್ಲಿ ಮಹಾರಾಷ್ಟ ರಾಜ್ಯದಲ್ಲಿ ಜಾಸ್ತಿ ಮಳೆಯಾಗಿರುವುದರಿಂದ ಸೊನ್ನ ಬ್ಯಾರಜದಿಂದ ಭೀಮಾ ನದಿಗೆ ಭಾರಿ ಪ್ರಮಾಣದಲ್ಲಿ ನೀರು ಬಿಡುತ್ತಿರುವುದರಿಂದ ಕೃಷ್ಣಾ ನದಿಗೆ ಅತೀ ಹೆಚ್ಚಿನ ಪ್ರಮಾಣದಲ್ಲಿ ಒಳ ಹರಿವು ಹೆಚ್ಚಾಗಿದ್ದು, ರಾಯಚೂರು ತಾಲೂಕಿನ ಕೃಷ್ಣಾ ನದಿ ಪಾತ್ರದ ಗ್ರಾಮಗಳ ಸಾರ್ವಜನಿಕರು ಅಗತ್ಯ ಎಚ್ಚರ ವಹಿಸುವಂತೆ ರಾಯಚೂರು ತಹಶೀಲ್ದಾರ್ ಸುರೇಶ್ ವರ್ಮ ಅವರು ತಿಳಿಸಿದ್ದಾರೆ.

ಕೃಷ್ಣ ನದಿಗೆ ನೀರು ಬಿಡುವ ಸಾಧ್ಯತೆ ಹೆಚ್ಚಾಗಿರುವುದರಿಂದ ರಾಯಚೂರು ತಾಲೂಕಿನ ಕೃಷ್ಣಾ ನದಿ ಪಾತ್ರದ ಗ್ರಾಮಗಳಾದ ಬುರ್ದಿಪಾಡ, ಗುರ್ಜಾಪೂರು, ಕೊರ್ತಕುಂದಾ, ಕುರ್ವಕುಲಾ, ಅಗ್ರಹಾರ, ಕುರ್ವಕುರ್ದಾ, ಅತ್ತೂರು, ದೇವಸೂಗೂರು, ಗಂಜಳ್ಳಿ, ಕಾಡೂರು, ಕರೆಕಲ್, ಡಿ.ರಾಂಪೂರು, ಅರಷಣಗಿ, ಮಾಮಡದೊಡ್ಡಿ, ಮಂಗಿಗಡ್ಡ, ರಾಲದೊಡ್ಡಿ, ಕೊರ್ವಿಹಾಳ ಗ್ರಾಮಗಳ ಗ್ರಾಮಸ್ಥರು ಯಾವುದೇ ಕಾರಣಕ್ಕೂ ನದಿಯ ಪಾತ್ರಕ್ಕೆ ತೆರಳಬಾರದು. ಅಲ್ಲದೆ ಸಾವರ್ಜನಿಕರು ತಮ್ಮ ದನ-ಕರುಗಳನ್ನು ನದಿಗೆ ತೆರಳದಂತೆ ನೋಡಿಕೊಳ್ಳುವುದು. ರಭಸವಾಗಿ ಬರುವ ನೀರಿನ ಜೊತೆಗೆ ಮೊಸಳೆಗಳು ಬರುವುದರಿಂದ ಪ್ರಾಣ ಹಾನಿಯಾಗುವ ಸಾಧ್ಯತೆ ಇರುವುದರಿಂದ ಎಚ್ಚರ ವಹಿಸಬೇಕು.

ರೈತರು ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಅಳವಡಿಸಿರುವ ಪಂಪಸೆಟ್‌ಗಳನ್ನು ಯಾವುದೇ ಅಹಿತಕರ ಘಟನೆಗಳು ಜರಗದಂತೆ ನದಿ ಪಾತ್ರದಿಂದ ಹೊರತೆಗೆಯುವುದು. ರೈತರು ಯಾವುದೇ ಸಾವು-ನೋವುಗಳು ಸಂಭವಿಸದಂತೆ ಪ್ರವಾಹದ ಮುನ್ಸೂಚನೆಯಂತೆ ಕ್ರಮ ಕೈಗೊಳ್ಳಬೇಕು.

ಕೃಷ್ಣಾ ನದಿಪಾತ್ರದ ನಡುಗಡ್ಡೆಗಳಾದ ಕುರ್ವಕುರ್ದಾ ಮತ್ತು ನಾರಗಡ್ಡೆ ಗ್ರಾಮದ ಸಾರ್ವಜನಿಕರು ಪ್ರವಾಹದ ಸಂದರ್ಭದಲ್ಲಿ ರಸ್ತೆ ಸಂಪರ್ಕ, ದೂರವಾಣಿ ಸಂಪರ್ಕ ಕಡಿತಗೊಳ್ಳುವುದರಿಂದ ಜೀವಹಾನಿ, ಪ್ರಾಣಹಾನಿ ಆಗದಂತೆ ಮುಂಜಾಗ್ರತ ಕ್ರಮವಾಗಿ ಆಹಾರ, ಔಷಧಿ, ಸಾಮಗ್ರಿಗಳನ್ನು ಶೇಖರಣೆ ಮಾಡಿಕೊಳ್ಳಬೇಕು. ಹಾಗೂ ವಯೋವೃದ್ಧರು, ದೀರ್ಘ ಕಾಯಿಲೆಯಿಂದ ಬಳುತ್ತಿರುವವರು ವಯಸ್ಕರು ಮತ್ತು ಮಕ್ಕಳು, ಗರ್ಭಿಣಿಯರು ಸುರಕ್ಷಿತವಾದ ಸ್ಥಳಗಳಿಗೆ ತೆರಳಬೇಕು ಎಂದು ರಾಯಚೂರು ತಹಶೀಲ್ದಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾಸಕ ಜಿ.ಹಂಪಯ್ಯನಾಯಕರಿಂದ 'ಎಚ್ಚರಿಕೆ' ಕಿರುಚಿತ್ರ ಬಿಡುಗಡೆ

ಯುವ ಮಾರ್ಗ ಸುದ್ದಿ

**ಸಿರವಾರ :** ಶಾಸಕ ಜಿ. ಹಂಪಯ್ಯನಾಯಕ ಸಾಹುಕಾರ ಅವರು ಸಿರವಾರ ಪಟ್ಟಣದಲ್ಲಿ ಯುವ ನಿರ್ದೇಶಕ ಮತ್ತು ನಟ ಶಿವಪ್ರಸಾದ್ ಗಣದಿನ್ನಿ ನಿರ್ಮಿಸಿದ 'ಎಚ್ಚರಿಕೆ' ಕಿರುಚಿತ್ರವನ್ನು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಯುವ ಜನತೆ ಧೂಮಪಾನ ಮತ್ತು ಮದ್ಯಪಾನದಿಂದ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿರುವುದು ದುಃಖದ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.ನಿರ್ದೇಶಕ ಶಿವಪ್ರಸಾದ್ ಗಣದಿನ್ನಿ ಉತ್ತಮ ಕಿರುಚಿತ್ರವನ್ನು ನಿರ್ಮಿಸಿದ್ದಾರೆ. ಎಲ್ಲರೂ ಇದನ್ನು ನೋಡಿ ಪ್ರೋತ್ಸಾಹಿಸಬೇಕು" ಎಂದು ಶಾಸಕ ಹಂಪಯ್ಯನಾಯಕ ಕರೆ ನೀಡಿದರು. ಮದ್ಯಪಾನ ಮಾಡಿ ವಾಹನ ಚಲಾಯಿಸುವು ದರಿಂದ ಅಪಘಾತಗಳು ಸಂಭವಿಸಿ ಸಾವು ಸಂಭವಿಸುತ್ತದೆ.



ಇದರಿಂದ ಹೆತ್ತವರಿಗೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ಕಿರುಚಿತ್ರದಲ್ಲಿ ಪರಿಣಾಮಕಾರಿಯಾಗಿ ತೋರಿಸಲಾಗಿದೆ ಎಂದು ಅವರು ಹೇಳಿದರು. ಯುವಜನತೆ ಮದ್ಯಪಾನ ಮತ್ತು ಧೂಮಪಾನದಿಂದ ದೂರವಿರಬೇಕು ಮತ್ತು ದೇಶ ಸೇವೆಗೆ, ಹೆತ್ತವರಿಗಾಗಿ ತಮ್ಮ ಜೀವನವನ್ನು ಮುಡಿಪಾಗಿಡಬೇಕು ಎಂಬ ಸಂದೇಶವನ್ನು ಕಿರುಚಿತ್ರ ಸಾರುತ್ತದೆ ಎಂದು ಶಾಸಕರು ನುಡಿದರು. "ಹಳ್ಳಿ ಪ್ರತಿಭೆಗಳಿಗೆ ಪ್ರೋತ್ಸಾಹ ಮುಖ್ಯ. ಪ್ರತಿಯೊಬ್ಬರೂ ಈ ಕಿರುಚಿತ್ರವನ್ನು ನೋಡಿ ಹಾರೈಸಬೇಕು" ಎಂದು ಅವರು ಒತ್ತಿ ಹೇಳಿದರು.

ಕಿರುಚಿತ್ರದ ನಿರ್ದೇಶಕ ಮತ್ತು ನಟ ಶಿವಪ್ರಸಾದ್ ಗಣದಿನ್ನಿ ಮಾತನಾಡಿ, 'ಶಿವ ಮೇಕರ್ಸ್' ಯೂಟ್ಯೂಬ್ ಚಾನೆಲ್‌ನಲ್ಲಿ ಮೇ 28, 2025 ರಂದು 'ಎಚ್ಚರಿಕೆ' ಕಿರುಚಿತ್ರದ ಟ್ರೈಲರ್ ಬಿಡುಗಡೆಯಾಗಿದ್ದು, ಸಂಪೂರ್ಣ ವಿಡಿಯೋ ಜೂನ್ 11, 2025 ರಂದು ಬಿಡುಗಡೆಯಾಗಲಿದೆ ಎಂದು ತಿಳಿಸಿದರು. ಪ್ರತಿಯೊಬ್ಬರೂ ಇದನ್ನು ನೋಡಿ ಹಾರೈಸುವಂತೆ ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಯುವ ಮುಖಂಡರಾದ ರಮೇಶ್ ದರ್ಶನಕರ್, ರವಿ ಹೆಚ್, ಪ್ರವೀಣ್ ಹೆಚ್, ಹನುಮೇಶ ಛಲವಾದಿ, ಶಿವಪ್ಪ ಹಳಿಹೊಸೂರು, ಎಂ.ಎಸ್. ಗಂಗು, ಶಂಕರ್, ಬಸುವ ಗ್ಯಾಂಗ್ ಮನ್, ಮಂತೇಶ್ ಗ್ರಾಮ ಪಂಚಾಯತಿ ಸದಸ್ಯರು, ಅನಿಲ್ ಮತ್ತು ಮಾರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಖಾಲಿ ಇರುವ ಹುದ್ದೆಗಳಿಗೆ ಮೇ.31ಕ್ಕೆ ನೇರ ಸಂದರ್ಶನ

**ರಾಯಚೂರು :**ಇಲ್ಲಿನ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ವಿನಿಮಯ ಇಲಾಖೆ ಕಚೇರಿಯಲ್ಲಿ ಮೇ 31ರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1.30 ಗಂಟೆವರೆಗೆ ನೇರ ಸಂದರ್ಶನ ಆಯೋಜನೆ ಮಾಡಿಲಾಗಿದ್ದು, ಆಸಕ್ತ ಯುವಕ ಅಥವಾ ಯುವತಿಯರು ಭಾಗಹಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ.

ನೇರ ಸಂದರ್ಶನವನ್ನು ಎರಡು ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಆಯೋಜನೆ ಮಾಡಲಾಗಿದ್ದು, ತಮ್ಮ ಕಂಪನಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿದ್ದಾರೆ.

18 ರಿಂದ 30 ವರ್ಷಗಳವರೆಗಿನ ಎಸ್.ಎಸ್.ಎಲ್.ಸಿ, ಪಿ.ಯು.ಸಿ ಹಾಗೂ ಎಲ್ಲಾ ಪದವೀಧರ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ. ವಿದ್ಯಾರ್ಹತೆಯ ಅಂಕ ಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ಬಯೋಡಾಟಾ, ಆಧಾರ್ ಕಾರ್ಡ ಪ್ರತಿ ಹಾಗೂ ಭಾವಚಿತ್ರಗಳೊಂದಿಗೆ ಆಗಮಿಸಬೇಕು.

ನೇರ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕವಿರುವುದಿಲ್ಲ, ಬದಲಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಈ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ; 08532-231684,9008211750, 8095125775ಗೆ ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ನವೀನ ಕುಮಾರ್ ಸಂಗೇಪಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶೌರತುನ್ನಿಸಾ ಬೇಗಂ ರವರಿಗೆ ಬಂಗಾರದ ಪದಕ



ಯುವ ಮಾರ್ಗ ಸುದ್ದಿ

**ಮಾನ್ವಿ:** ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ವತಿಯಿಂದ ಮೇ 26 ರಂದು ನಡೆದ 14 ನೇ ಘಟಿಕೋತ್ಸವದಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಯನ್ನು ಸಂಸ್ಕರಣೆ ಮತ್ತು ಆಹಾರ ತಂತ್ರಜ್ಞಾನ ಪದವಿಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಗಳಿಸಿ ರಾಯಚೂರಿನ ಶೌರತುನ್ನಿಸಾಬೇಗಂ ತಂದೆ ಶೇಖಹುಸೇನ್ ಇವರು ಬಂಗಾರ ಪದಕವನ್ನು ಪಡೆದಿರುವುದು.

## ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಸಲ್ಲಿಸುವುದಕ್ಕೆ ಓ.ಟಿ.ಆರ್.ಸಂಖ್ಯೆ ಸೃಜಿಸಿಕೊಳ್ಳಿ

ಯುವ ಮಾರ್ಗ ಸುದ್ದಿ



**ಮಾನ್ವಿ:** ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಿಂದ 2025 -26 ನೇ ಸಾಲಿಗೆ ಪರಿಶಿಷ್ಟ ಪಂಗಡದ ಮೆಟ್ರೀಕ್ ಪೂರ್ವ 9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳು ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಸಲ್ಲಿಸುವುದಕ್ಕೆ ಎನ್.ಎಸ್.ಪಿ.ಪೋರ್ಟೆಲ್ ನಲ್ಲಿ https:// scholarships.gov.in ನಲ್ಲಿ ಕ್ಲಿಕ್ ಮಾಡಿ ಓ.ಟಿ.ಆರ್.ಸಂಖ್ಯೆಯನ್ನು ಸೃಜಿಸಿಕೊಂಡು ನಂತರ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕೇಂದ್ರ ಕಚೇರಿಯ ಸಹಾಯವಾಣಿ ಸಂಖ್ಯೆ 080-22261789ಹಾಗೂ ತಾಲೂಕು ಕಚೇರಿಯಲ್ಲಿ 9535828236 ಗೆ ಕರೆ ಮಾಡಿ ಮಾಹಿತಿಯನ್ನು ಪಡೆಯಬಹುದು ಎಂದು ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಮಹಾಲಿಂಗಪ್ಪ ಇಂಗಳದಾಳ್ ಪ್ರಕಟಣೆಯಲ್ಲಿ ಕೋರಿದ್ದಾರೆ.

## 6ನೇ ತರಗತಿ ಪ್ರವೇಶಾತಿಗೆ ಜೂನ್ 03, 04ರಂದು ಕೌನ್ಸೆಲಿಂಗ್

**ರಾಯಚೂರು:**ಇಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2025-26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮಾದರಿ ವಸತಿ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶಾತಿಗೆ ಸಂಬಂಧಿಸಿದಂತೆ ಜೂನ್ 3 ಹಾಗೂ 4ರಂದು ಕೌನ್ಸಲಿಂಗ್ ಹಮ್ಮಿಕೊಳ್ಳಲಾಗಿದ್ದು, ಅರ್ಹ ಅಭ್ಯರ್ಥಿಗಳು ಭಾಗವಹಿಸುವಂತೆ ಕೋರಲಾಗಿದೆ.

ಜಿಲ್ಲೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ರಾಯಚೂರು, ಗಿಲ್ಲೇಸೂಗೂರು, ಮಾನವಿ, ಸಿಂಧನೂರು, ಲಿಂಗಸೂಗೂರು ಹಾಗೂ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಮರಸ್ ಕ್ಯಾಂಪ್ ವಸತಿ ಶಾಲೆ ಮತ್ತು ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆ ರಾಯಚೂರು ಇಲ್ಲಿಗೆ 6ನೇ ತರಗತಿಯಿಂದ 10ನೇ ತರಗತಿಯವರೆಗೆ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಅಲ್ಪಸಂಖ್ಯಾತರ ಸಮುದಾಯಕ್ಕೆ ಶೇ.75 ರಷ್ಟು ಸ್ಥಾನಗಳನ್ನು (ಮುಸ್ಲಿಂ ಶೇ.77, ಕ್ರಿಶ್ಚಿಯನ್ ಶೇ.14, ಜೈನ್ ಶೇ.7, ಸಿಖ್ ಶೇ.2, ಬೌದ್ಧ ಶೇ.2) ಹಾಗೂ ಶೇ.25ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರಿಗೆ ಮೀಸಲಿರಿಸಿ ಏ.27ರಂದು ಪ್ರವೇಶ ಪರೀಕ್ಷೆ ನಡೆಸಿದ್ದು, ಮೇ.27ರಂದು ಪ್ರವೇಶ ಪರೀಕ್ಷೆಯ ಫಲಿತಾಂಶ ಮತ್ತು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

ಜೂನ್ 03ರಂದು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ನಗರದ ಚಂದ್ರಬಂಡಾ ರಸ್ತೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಾಗೂ ಜೂನ್ 04ರಂದು ಇತರೆ ವರ್ಗಗಳ ವಿದ್ಯಾರ್ಥಿಗಳಿಗೆ ಕೌನ್ಸೆಲಿಂಗ್ ಏರ್ಪಡಿಸಲಾಗಿದ್ದು, ವಿದ್ಯಾರ್ಥಿಗಳು ಪರೀಕ್ಷೆಯ ಪ್ರವೇಶ

## ಜೂ.6ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ

**ಮಾನ್ವಿ:** ಪಟ್ಟಣದ ಆಶ್ವನಿ ಮಲ್ಟಿಸ್ಪೇಷಾಲಿಟಿ ಹಾಸ್ಪಿಟಲ್ ನಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಧ್ಯಕ್ಷರಾದ ಎಂ. ಈರಣ ರವರ ಹುಟ್ಟು ಹಬ್ಬದ ಅಂಗವಾಗಿ ಜೂ6 ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು ತಜ್ಞ ವೈದ್ಯರಾದ ಡಾ.ಪೂಜಾ ಶಿವಕುಮಾರ್.ಎಂ., ಡಾ.ಆಶ್ವನಿಕಾಂತ. ಡಾ.ರಮ್ಯಾ ವೀರವಲ್ಲಿ, ಡಾ.ಜಿ.ಕೆ.ಗುಪ್ತಾ,ಡಾ.ಆಸಿಫ್ ಸೇರಿದಂತೆ ತಜ್ಞಾ ವೈದ್ಯರು ಆರೋಗ್ಯ ತಪಾಸಣೆ ನಡೆಸಲಿದ್ದಾರೆ ಹೆಚ್ಚಿನ ಮಾಹಿತಿಗಾಗಿ ದೂ.9902409198,8073046731,9535607038 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ಕೋರಲಾಗಿದೆ.

Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**